# ಕನ್ನಡ ಪೋಸ್ಟ್

KANNADA POST

ಸಂಪಾದಕ : ಮಂಜು ಬನವಾಸೆ

ಇದು ಸುದ್ದಿ ವಿಳಾಸ

ಕನ್ನಡ ದಿನಪತ್ರಿಕೆ

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.02 | Issue. 259 | Pages. 2 | Date: 27-09-2026, SUNDAY | RNI NO: KARKAN/2024/89601 | Kannada Daily

ಸಂಪುಟ : 02 - ಸಂಚಿಕೆ : 259 - ಪುಟಗಳು : 2 | 27-09-2026 ಭಾನುವಾರ | Ph: 8762954248 | ದರ : ₹1


## ಹಾಸನಾಂಬ ಜಾತ್ರಾ ಮಹೋತ್ಸವಕ್ಕೆ ವೈಭವದ ಮೆರುಗು

### ಪೋಸ್ಟರ್, ವೆಬ್‌ಸೈಟ್ ಬಿಡುಗಡೆ ಮಾಡಿದ ಸಚಿವ ಶಿವಲಿಂಗೇಗೌಡ | ಭಕ್ತರ ಸಂಖ್ಯೆ ಹೆಚ್ಚುವ ನಿರೀಕ್ಷೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಅ. 29 ರಿಂದ ನ. 11ರ ವರೆಗೆ ಶಕ್ತಿದೇವತೆ ಹಾಸನಾಂಬ ಜಾತ್ರಾ ಮಹೋತ್ಸವ ನಡೆಯಲಿದ್ದು, ಹಾಸನದ ದೊಡ್ಡ ಹಬ್ಬವಾಗಿ ಆಚರಿಸಲಾಗುವುದು ಎಂದು ಜಿಲ್ಲಾ ಉಸ್ತುವಾರಿ ಸಚಿವ ಕೆ.ಎಂ.ಶಿವಲಿಂಗೇಗೌಡ ಹೇಳಿದರು.

ನಗರದ ಹಿಮ್ಸ್ ಸಭಾಂಗಣದಲ್ಲಿ ಶನಿವಾರ ಹಾಸನಾಂಬ ದರ್ಶನೋತ್ಸವದ ಪೂರ್ವಭಾವಿ ಸಭೆಯಲ್ಲಿ ಉತ್ಸವದ ಪೋಸ್ಟರ್ ಮತ್ತು ವೆಬ್ ಸೈಟ್ ಅನಾವರಣಗೊಳಿಸಿ ಮಾತನಾಡಿ, ಕಳೆದ ವರ್ಷ ಉತ್ಸವಕ್ಕೆ ಉತ್ತಮ ಹೆಸರು ದೊರೆತಿದ್ದು, ಈ ಬಾರಿ ಅದಕ್ಕಿಂತಲೂ ಹೆಚ್ಚಿನ ವ್ಯವಸ್ಥೆಗಳನ್ನು ಕಲ್ಪಿಸಿ ಯಶಸ್ವಿಯಾಗಿ ನಡೆಸಲು ಉದ್ದೇಶಿಸಲಾಗಿದೆ. ಈ ನಿಟ್ಟಿನಲ್ಲಿ ಹಿಂದಿನ ವರ್ಷದ ಸಾಧಕ-ಬಾಧಕಗಳನ್ನು ಚರ್ಚಿಸಿ ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದರು.

ಜಿಲ್ಲೆಯ ಹೆಸರು ದೆಹಲಿಯ ವರೆಗೂ ತಲುಪಿದೆ. ಜಿಲ್ಲೆಯ ಗೌರವವನ್ನು ಉಳಿಸಿಕೊಂಡು ಮತ್ತಷ್ಟು ಎತ್ತರಕ್ಕೆ ಕೊಂಡೊಯ್ಯುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ಜಿಲ್ಲೆಯ ಜನರು ರಾಜ್ಯದ ಜನತೆಗೆ ನಮ್ಮ ಸಂಸ್ಕೃತಿ, ಪರಂಪರೆ ಹಾಗೂ ಆತಿಥ್ಯವನ್ನು ಪರಿಚಯಿಸುವ ಕೆಲಸ ಮಾಡಬೇಕು. ಉತ್ಸವದ ಯಶಸ್ಸಿಗೆ ಸಾರ್ವಜನಿಕರ ಸಲಹೆಗಳನ್ನು




ಸ್ವೀಕರಿಸಲಾಗುವುದು ಎಂದರು.

ರಾಜ್ಯ ಹಾಗೂ ಜಿಲ್ಲಾ ಮಟ್ಟದ ಕ್ರಿಕೆಟ್ ಸೇರಿ ವಿವಿಧ ಕ್ರೀಡಾಕೂಟಗಳಲ್ಲಿ ಭಾಗವಹಿಸುವವರಿಗೆ ಸ್ಮರಣಿಕೆ ನೀಡಲಾಗುವುದು. ರಂಗೋಲಿ ಸ್ಪರ್ಧೆ, ಸಾಂಸ್ಕೃತಿಕ ಚಟುವಟಿಕೆಗಳಿಗೂ ಅವಕಾಶ ಕಲ್ಪಿಸಲಾಗುವುದು. ಹಾಸನಾಂಬ ಉತ್ಸವವನ್ನು ಜನರ ಪಾಲ್ಗೊಳ್ಳುವಿಕೆಯಿಂದ ದೊಡ್ಡ ಹಬ್ಬವನ್ನಾಗಿ ರೂಪಿಸುವುದು ಆಶಯವಾಗಿದೆ ಎಂದು ಹೇಳಿದರು.

ಉತ್ಸವದ ನಿರ್ವಹಣೆಗಾಗಿ ಈಗಾಗಲೇ ವಿವಿಧ ಸಮಿತಿಗಳನ್ನು ರಚಿಸಲಾಗಿದೆ. ಇನ್ನಷ್ಟು ಸಮಿತಿಗಳನ್ನು ರಚಿಸಿ ಜಿಲ್ಲಾಡಳಿತ, ಸಾರ್ವಜನಿಕರು ಹಾಗೂ ಭಕ್ತರು ಒಟ್ಟಾಗಿ ಕಾರ್ಯನಿರ್ವಹಿಸಲಿದ್ದಾರೆ. ಎಲ್ಲರೂ ಒಗ್ಗಟ್ಟಿನಿಂದ ಕೆಲಸ ಮಾಡಿದರೆ ಜಿಲ್ಲೆಗೆ ಉತ್ತಮ ಹೆಸರು ತಂದುಕೊಡಲು ಸಾಧ್ಯವಾಗಲಿದೆ ಎಂದರು.

ಹಾಸನಾಂಬ ಉತ್ಸವದ ಎಲ್ಲಾ ಟೆಂಡರ್ ಪ್ರಕ್ರಿಯೆಗಳನ್ನು ಸಾರ್ವಜನಿಕವಾಗಿ ನಡೆಸಲಾಗುವುದು. ದೇವರ ಹಣದ ಲೆಕ್ಕಾಚಾರದಲ್ಲಿ 10 ಪೈಸೆಯೂ ವ್ಯತ್ಯಾಸವಾಗದಂತೆ ಎಚ್ಚರಿಕೆ ವಹಿಸಲಾಗುವುದು. ದೇವರ ಕಾರ್ಯವನ್ನು ಸಂಪೂರ್ಣ ಸ್ವಚ್ಛತೆ ಮತ್ತು ಪಾರದರ್ಶಕತೆಯಿಂದ ನಿರ್ವಹಿಸಲಾಗುವುದು. ಟೆಂಡರ್‌ದಾರರು ಕೂಡ ತಾಯಿಯ ಸೇವೆ ಮಾಡುವ ಅವಕಾಶ ಸಿಕ್ಕಿದೆ ಎಂಬ ಭಾವನೆಯಿಂದ ಕೆಲಸ ಮಾಡಬೇಕು. ಉತ್ಸವದ ಹೆಸರಿನಲ್ಲಿ ದುಂದು ವೆಚ್ಚಕ್ಕೆ ಅವಕಾಶ ನೀಡುವುದಿಲ್ಲ. ದೇವರ ಹಣ ದುರುಪಯೋಗವಾಗದಂತೆ ನೋಡಿಕೊಳ್ಳಲಾಗುವುದು ಎಂದರು.

ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶುಭಾನ್ವಿತ, ಡಿಎಫ್‌ಒ ಸೌರಭ್ ಕುಮಾರ್, ಜಿ.ಪಂ. ಸಿಇಒ ಶುಭಂ ಶುಕ್ಲಾ, ಎಡಿಸಿ ಕೃಷ್ಣಮೂರ್ತಿ, ಎಸಿ ಜಗದೀಶ್ ಗಂಗಣ್ಣನವರ್ ಇದ್ದರು.

### ನ. 11 ರಂದು ಗರ್ಭಗುಡಿ ಬಾಗಿಲು ಬಂದ್

ಅ.29 ರಿಂದ ನ.11ರ ವರೆಗೆ ಒಟ್ಟು 14 ದಿನಗಳ ಕಾಲ ಹಾಸನಾಂಬ ದರ್ಶನ ಇರಲಿದೆ. ಅ. 29ರ ಮಧ್ಯಾಹ್ನ 12 ಗಂಟೆಗೆ ಹಾಸನಾಂಬ ದೇಗುಲದ ಬಾಗಿಲು ತೆರೆಯಲಿದೆ. ಮೊದಲ ದಿನ ಸಾರ್ವಜನಿಕರ ದರ್ಶನಕ್ಕೆ ಅವಕಾಶ ಇರುವುದಿಲ್ಲ. ಅ. 30 ರಿಂದ ನ.10ರ ವರೆಗೆ ನೈವೇದ್ಯ ಸಮಯ ಹೊರತುಪಡಿಸಿ ದಿನಪೂರ್ತಿ ದೇವಿ ದರ್ಶನ ಇರಲಿದೆ. ನ.11ರಂದು ಗರ್ಭಗುಡಿ ಬಾಗಿಲು ಮುಚ್ಚಲಾಗುತ್ತದೆ. ಕೊನೆಯ ದಿನ ಸಾರ್ವಜನಿಕರ ದರ್ಶನಕ್ಕೆ ಅವಕಾಶ ಇರುವುದಿಲ್ಲ.

## ಎಸ್‌ಐಆರ್ ವಿರೋಧಿಸಿ ಎಡಪಕ್ಷಗಳ ಪ್ರತಿಭಟನೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಶೀಲನೆ (ಎಸ್‌ಐಆರ್) ಪ್ರಕ್ರಿಯೆಯನ್ನು ತಕ್ಷಣ ನಿಲ್ಲಿಸಿ, ಮತದಾರರ ಪಟ್ಟಿಯಿಂದ ತಪ್ಪಾಗಿ ಹೊರಗಿಡಲಾಗಿರುವವರ ಮತದಾನ ಹಕ್ಕುಗಳನ್ನು ಮರುಸ್ಥಾಪಿಸಬೇಕು ಎಂದು ಆಗ್ರಹಿಸಿ ಸಿಪಿಐಎಂ ಮತ್ತು ಸಿಪಿಐ ನೇತೃತ್ವದಲ್ಲಿ ನಗರದಲ್ಲಿ ಶನಿವಾರ ಪ್ರತಿಭಟನೆ ನಡೆಸಲಾಯಿತು.

ನಗರದ ಹೇಮಾವತಿ ಪ್ರತಿಮೆಯ ಮುಂಭಾಗದಲ್ಲಿ ನಡೆದ ಪ್ರತಿಭಟನೆಯಲ್ಲಿ ಮಾತನಾಡಿದ ಮುಖಂಡರು, ಚುನಾವಣಾ ಆಯೋಗದ ಕಾರ್ಯವೈಖರಿ ಹಾಗೂ ಅದರ ಸ್ವಾತಂತ್ರ್ಯ ಮತ್ತು ವಿಶ್ವಾಸಾರ್ಹತೆ ಕುರಿತು ಗಂಭೀರ ಪ್ರಶ್ನೆಗಳು ಉದ್ಭವಿಸಿವೆ ಎಂದು ಆರೋಪಿಸಿದರು.

ಮೂವರು ಚುನಾವಣಾ ಆಯುಕ್ತರಲ್ಲಿ ಇಬ್ಬರು ಮತದಾರರ ನೋಂದಣಿ, ಹೆಸರುಗಳ ಅಳಿಸುವಿಕೆ ಮತ್ತು ಮರುಸ್ಥಾಪನೆ ಹಾಗೂ ಎಸ್‌ಐಆರ್‌ಗೆ ಸಂಬಂಧಿಸಿದ ನಿರ್ಧಾರಗಳ ಕುರಿತು ಹಲವು ಸಂದರ್ಭಗಳಲ್ಲಿ ಆಕ್ಷೇಪ ವ್ಯಕ್ತಪಡಿಸಿರುವುದು ವರದಿಯಾಗಿದೆ. ತಮ್ಮ ಒಪ್ಪಿಗೆಯಿಲ್ಲದೆ ನಿರ್ಧಾರಗಳನ್ನು ಕೈಗೊಳ್ಳಲಾಗುತ್ತಿದೆ ಎಂಬ ಆತಂಕವನ್ನೂ ಅವರು ವ್ಯಕ್ತಪಡಿಸಿದ್ದಾರೆ ಎಂದು ಪ್ರತಿಭಟನಾಕಾರರು ಹೇಳಿದರು.

ಮತದಾರರ ದತ್ತಾಂಶ ನಿರ್ವಹಣೆಯಲ್ಲಿ ಕೇಂದ್ರೀಕರಣ ಹೆಚ್ಚುತ್ತಿರುವುದು ಹಾಗೂ ರಾಜ್ಯ ಮತ್ತು ಕ್ಷೇತ್ರ ಮಟ್ಟದ ಶಾಸನಬದ್ಧ ಅಧಿಕಾರಿಗಳಿಗೆ ಪ್ರವೇಶದ




ಮೇಲೆ ನಿರ್ಬಂಧಗಳಿರುವುದು ಪ್ರಜಾಸತ್ತಾತ್ಮಕ ವ್ಯವಸ್ಥೆಯ ದೃಷ್ಟಿಯಿಂದ ಆತಂಕಕಾರಿ ಎಂದು ಅವರು ಹೇಳಿದರು. ಚುನಾವಣಾ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಕಾಪಾಡುವುದು ಹಾಗೂ ಸಾರ್ವತ್ರಿಕ ವಯಸ್ಕ ಮತದಾನದ ಹಕ್ಕನ್ನು ರಕ್ಷಿಸುವುದು ಚುನಾವಣಾ ಆಯೋಗದ ಪ್ರಮುಖ ಜವಾಬ್ದಾರಿಯಾಗಿದೆ ಎಂದು ಒತ್ತಾಯಿಸಿದರು.

ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರನ್ನು ಅಧಿಕಾರದಿಂದ ವಜಾಗೊಳಿಸಬೇಕು, ಎಸ್‌ಐಆರ್ ಪ್ರಕ್ರಿಯೆ ಸ್ಥಗಿತಗೊಳಿಸಬೇಕು, ತಪ್ಪಾಗಿ ಮತದಾರರ ಪಟ್ಟಿಯಿಂದ ಹೊರಗಿಡಲಾದವರ ಹಕ್ಕುಗಳನ್ನು ಮರುಸ್ಥಾಪಿಸಬೇಕು ಹಾಗೂ ಚುನಾವಣಾ ಆಯೋಗದ ಸ್ವತಂತ್ರ ಮತ್ತು ಪ್ರಜಾಸತ್ತಾತ್ಮಕ ಕಾರ್ಯನಿರ್ವಹಣೆಯನ್ನು ಖಚಿತಪಡಿಸಬೇಕು ಎಂದು ಆಗ್ರಹಿಸಿದರು.

ಚುನಾವಣಾ ಆಯುಕ್ತರ ನೇಮಕಾತಿ ವ್ಯವಸ್ಥೆಯಲ್ಲಿ ಬದಲಾವಣೆ ತರಬೇಕು. ಪ್ರಧಾನಿ, ವಿರೋಧ ಪಕ್ಷದ ನಾಯಕ ಹಾಗೂ ಭಾರತದ ಮುಖ್ಯ ನ್ಯಾಯಮೂರ್ತಿಗಳನ್ನು ಒಳಗೊಂಡ ಆಯ್ಕೆ ಪ್ರಕ್ರಿಯೆ ಜಾರಿಗೆ ತರಬೇಕು ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು.

## ಚರಂಡಿ ಸರಿಪಡಿಸಿ: ಪ್ರತಿಭಟನೆ ಎಚ್ಚರಿಕೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಸೀಕೆರೆ: ನಗರದ 20ನೇ ವಾರ್ಡ್‌ನ ಬಸವೇಶ್ವರ ನಗರದಲ್ಲಿ 2013 ರಿಂದಲೂ ಒಳಚರಂಡಿ ಸಮಸ್ಯೆ ಮುಂದುವರಿದಿದ್ದು, ಚರಂಡಿಗಳಲ್ಲಿ ಪ್ರತಿದಿನ ಮಲ-ಮೂತ್ರ ಹರಿಯುತ್ತಿರುವುದರಿಂದ ದುರ್ವಾಸನೆ ಹಾಗೂ ಅನಾರೋಗ್ಯದ ಸಮಸ್ಯೆ ಎದುರಾಗಿದೆ ಎಂದು ಸಾಮಾಜಿಕ ಹೋರಾಟಗಾರ ಬಿ.ಎನ್. ರಾಘವೇಂದ್ರ ಆರೋಪಿಸಿದರು.

ನಗರದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಮಸ್ಯೆ ಕುರಿತು ನಗರಸಭೆಗೆ ಹಲವು ಬಾರಿ ಮೌಖಿಕವಾಗಿ ಹಾಗೂ ಲಿಖಿತವಾಗಿ ಮನವಿ ಸಲ್ಲಿಸಿದರೂ ಇದುವರೆಗೆ ಯಾವುದೇ ಶಾಶ್ವತ ಪರಿಹಾರ ಕಲ್ಪಿಸಿಲ್ಲ. ಪರಿಣಾಮವಾಗಿ ವಾರ್ಡ್‌ನ ನಿವಾಸಿಗಳು, ಅದರಲ್ಲೂ ಮಕ್ಕಳು ಹಾಗೂ ವೃದ್ಧರು ತೀವ್ರ ತೊಂದರೆ ಅನುಭವಿಸುವಂತಾಗಿದೆ ಎಂದು ದೂರಿದರು.

ಬಿಜೆಪಿ ಸರ್ಕಾರದ ಅವಧಿಯಲ್ಲಿ ಒಳಚರಂಡಿ ಕಾಮಗಾರಿಗಾಗಿ ನೂರಾರು ಕೋಟಿ ರೂಪಾಯಿ ಅನುದಾನ ಬಂದಿದ್ದರೂ ಕಾಮಗಾರಿ ಕಳಪೆ ಗುಣಮಟ್ಟದಿಂದ ಕೂಡಿರುವುದರಿಂದ ಈ ರೀತಿಯ ಸಮಸ್ಯೆ ಉಂಟಾಗಿದೆ ಎಂದು ಆರೋಪಿಸಿದರು. ನಗರದಾದ್ಯಂತ ಬೀದಿ ನಾಯಿಗಳ ಹಾವಳಿ ಹೆಚ್ಚಾಗಿದ್ದು, ವಾರ್ಡ್‌ಗಳ ಸ್ವಚ್ಛತೆಗೆ ಪೌರಕಾರ್ಮಿಕರ ಕೊರತೆಯೂ ಇದೆ ಎಂದು ತಿಳಿಸಿದರು.

ರೈಲು ನಿಲ್ದಾಣದಿಂದ ಬಸವೇಶ್ವರ ನಗರಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಯಲ್ಲಿ ನೂರಾರು ಗುಂಡಿಗಳಿದ್ದು, ವಾಹನ ಸವಾರರು ಹಾಗೂ ಸಾರ್ವಜನಿಕರು ತೊಂದರೆ ಅನುಭವಿಸುತ್ತಿದ್ದಾರೆ.

ನಗರಸಭೆಗೆ ಚುನಾಯಿತ ಕೌನ್ಸಿಲರ್‌ಗಳಿಲ್ಲದ ಹಿನ್ನೆಲೆಯಲ್ಲಿ ನಗರಸಭೆ ಆಯುಕ್ತರು ವಾರಕ್ಕೊಮ್ಮೆ ಪ್ರತಿ ವಾರ್ಡ್‌ಗೆ ಭೇಟಿ ನೀಡಿ ಸಾರ್ವಜನಿಕರ ಸಮಸ್ಯೆಗಳನ್ನು ಆಲಿಸಿ ಪರಿಹರಿಸಬೇಕು ಎಂದು ಒತ್ತಾಯಿಸಿದರು.

ಕಳೆದ ನಾಲ್ಕು ವರ್ಷಗಳಿಂದ ಆಯುಕ್ತರು ಯಾವುದೇ ವಾರ್ಡ್‌ಗೆ ಭೇಟಿ ನೀಡಿ ಸಾರ್ವಜನಿಕರ ಸಮಸ್ಯೆ ಆಲಿಸಿಲ್ಲ ಎಂದು ಆರೋಪಿಸಿದ ಅವರು, ಪರಿಸರ ಅಭಿಯಂತರರು ಹಾಗೂ ಆರೋಗ್ಯಾಧಿಕಾರಿಗಳು ಪ್ರತಿದಿನ ಸ್ವಚ್ಛತಾ ಕಾರ್ಯದ ಮೇಲ್ವಿಚಾರಣೆ ನಡೆಸಬೇಕು. ಕಸದ ವಾಹನಗಳು ಪ್ರತಿದಿನ ಬೆಳಿಗ್ಗೆ ವಾರ್ಡ್‌ಗಳಿಗೆ ಆಗಮಿಸುವಂತೆ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ನಗರಸಭೆ ಕಚೇರಿ ಮುಂಭಾಗದಲ್ಲಿ ಈ-ಸ್ವತ್ತು, ಖಾತೆ ಬದಲಾವಣೆ, ಹೊಸ ನಲ್ಲಿ ಸಂಪರ್ಕ, ತಾತ್ಕಾಲಿಕ ನಲ್ಲಿ ಸಂಪರ್ಕ, ಜನನ-ಮರಣ ಪ್ರಮಾಣಪತ್ರ ಸೇರಿದಂತೆ ವಿವಿಧ ಸೇವೆಗಳ ಶುಲ್ಕದ ದರಪಟ್ಟಿಯನ್ನು ಸಾರ್ವಜನಿಕರಿಗೆ ಕಾಣುವಂತೆ ಅಳವಡಿಸಬೇಕು.

ಹಿಂದೂ ರುದ್ರ ಭೂಮಿ ಪ್ರದೇಶದಲ್ಲಿ ನೀರಿನ ವ್ಯವಸ್ಥೆ ಕಲ್ಪಿಸಬೇಕು. ನಗರಸಭೆಯಲ್ಲಿ ದಲ್ಲಾಳಿಗಳ ಹಾವಳಿ ಹೆಚ್ಚಾಗಿದ್ದು, ಅದನ್ನು ನಿಯಂತ್ರಿಸಬೇಕು ಎಂದು ಒತ್ತಾಯಿಸಿದರು.

## 33ನೇ ವರ್ಷದ ಗಣೇಶೋತ್ಸವ : ಸೆ.29ರಂದು ಸಾಂಸ್ಕೃತಿಕ ವೈಭವ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ನಗರದ ವಾರ್ಡ್ ನಂ.2ರ ಅಶೋಕ ಬಡಾವಣೆಯ ಆಡುವಳ್ಳಿಯಲ್ಲಿ ಸಮತಾ ಸಾಂಸ್ಕೃತಿಕ ಕಲಾ ಸಂಘ ಹಾಗೂ ಶ್ರೀ ವಿನಾಯಕ ಗೆಳೆಯರ ಬಳಗದ ವತಿಯಿಂದ 33ನೇ ವರ್ಷದ ಗಣೇಶೋತ್ಸವ ಅಂಗವಾಗಿ ಸೆ.29ರಂದು ಸಾಂಸ್ಕೃತಿಕ ವೈಭವ ಕಾರ್ಯಕ್ರಮವನ್ನು ಅದ್ಧೂರಿಯಾಗಿ ಆಯೋಜಿಸಲಾಗಿದೆ ಎಂದು ಸುನೀಲ್ ಆಡುವಳ್ಳಿ ತಿಳಿಸಿದರು.

ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಗಣೇಶೋತ್ಸವವನ್ನು ಕೇವಲ ಧಾರ್ಮಿಕ ಆಚರಣೆಗೆ ಸೀಮಿತಗೊಳಿಸದೆ ಕಲೆ, ಸಂಸ್ಕೃತಿ, ಪ್ರತಿಭೆ ಹಾಗೂ ಸಮಾಜ ಸೇವೆಯನ್ನು ಗೌರವಿಸುವ ವೇದಿಕೆಯನ್ನಾಗಿ ರೂಪಿಸುವ ಉದ್ದೇಶದಿಂದ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ಎಂದರು.

ಸೆ.29ರಂದು ನಡೆಯುವ ಸಾಂಸ್ಕೃತಿಕ ವೈಭವದಲ್ಲಿ ಖ್ಯಾತ




ಗಾಯಕರಾದ ಜೋಗಿ ಸುನೀತಾ ಹಾಗೂ ಕಡಬಗೆರೆ ಮುನಿರಾಜು ಅವರಿಂದ ವಿಶೇಷ ಗಾನ ರಸಮಂಜರಿ ನಡೆಯಲಿದೆ. ಕನ್ನಡ ಚಿತ್ರರಂಗದ ನಿರ್ದೇಶಕ ಹಾಗೂ ನಟ ದುನಿಯಾ ವಿಜಯ್ ಕಾರ್ಯಕ್ರಮಕ್ಕೆ ಆಗಮಿಸಲಿದ್ದು, ವಿವಿಧ ಕಲಾವಿದರಿಂದ ನೃತ್ಯ, ಸಂಗೀತ ಸೇರಿದಂತೆ ಮನರಂಜನಾ ಕಾರ್ಯಕ್ರಮಗಳು ನಡೆಯಲಿವೆ ಎಂದು ಹೇಳಿದರು.

ಸಮಾಜದ ದಿನನಿತ್ಯದ ಅಗತ್ಯಗಳಿಗೆ ಸೇವೆ ಸಲ್ಲಿಸುತ್ತಿರುವ ಪೌರಕಾರ್ಮಿಕರು, ವಾಟರ್‌ಮ್ಯಾನ್, ಲೈಟ್‌ಮ್ಯಾನ್, ಯುಜಿಡಿ ಕಾರ್ಮಿಕರು, ಅಂಚೆ ಇಲಾಖೆಯ ಪೋಸ್ಟ್‌ಮ್ಯಾನ್‌ಗಳು, ಅಂಗನವಾಡಿ ಹಾಗೂ ಆಶಾ ಕಾರ್ಯಕರ್ತೆಯರು ಮತ್ತು ಸರ್ಕಾರಿ ಶಾಲೆಗಳ ಮುಖ್ಯ ಶಿಕ್ಷಕರನ್ನು ಗುರುತಿಸಿ ಸನ್ಮಾನಿಸಲಾಗುವುದು. ಕಲೆ, ಸಾಹಿತ್ಯ, ಶಿಕ್ಷಣ, ಕ್ರೀಡೆ ಹಾಗೂ ಸಮಾಜ ಸೇವೆ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವವರನ್ನೂ ಗೌರವಿಸಲಾಗುವುದು ಎಂದರು.

ಗಣೇಶೋತ್ಸವದ ಅಂಗವಾಗಿ ಸೆ.25ರಂದು ವಿಶೇಷ ಪೂಜೆ, ಸೆ.26ರಂದು ಮಕ್ಕಳಿಗೆ ಆಟೋಟ ಸ್ಪರ್ಧೆ ಹಾಗೂ ಭಜನಾ ಕಾರ್ಯಕ್ರಮ, ಸೆ.27ರಂದು ಮಹಿಳೆಯರಿಗೆ ರಂಗೋಲಿ ಸ್ಪರ್ಧೆ ಮತ್ತು ಸೆ.28ರಂದು ಮಹಾಮಂಗಳಾರತಿ ಹಾಗೂ ಅನ್ನಸಂತರ್ಪಣೆ ಆಯೋಜಿಸಲಾಗಿದೆ. ರಂಗೋಲಿ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ 10 ಸಾವಿರ, ದ್ವಿತೀಯ 5 ಸಾವಿರ ಹಾಗೂ ತೃತೀಯ 3 ಸಾವಿರ ನೀಡಲಾಗುವುದು.

ಅ.1ರಂದು ಸಂಜೆ ಮಹಾಮಂಗಳಾರತಿ ಬಳಿಕ ವಿವಿಧ ಸಾಂಸ್ಕೃತಿಕ ಕಲಾ ತಂಡಗಳೊಂದಿಗೆ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿ ಗಣೇಶಮೂರ್ತಿಯ ವಿಸರ್ಜನೆ ನೆರವೇರಿಸಲಾಗುವುದು. ಸಾರ್ವಜನಿಕರು, ಕಲಾಭಿಮಾನಿಗಳು ಹಾಗೂ ಮಾಧ್ಯಮದವರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಕಾರ್ಯಕ್ರಮ ಯಶಸ್ವಿಗೊಳಿಸಬೇಕು ಎಂದು ಸುನೀಲ್ ಆಡುವಳ್ಳಿ ಮನವಿ ಮಾಡಿದರು.

ಪತ್ರಿಕಾಗೋಷ್ಠಿಯಲ್ಲಿ ನಿವಾಸಿಗಳಾದ ಹೇಮಂತ್ ಕುಮಾರ್, ಪ್ರಜ್ವಲ್, ಅನಿಲ್ ಕುಮಾರ್, ಸಂಜಯ್, ವಿನಿತ್ ಇದ್ದರು.

## ಸಕ್ಕರೆ ಕಾರ್ಖಾನೆ ಚುನಾವಣೆಗೆ ಶಾಸಕ ಬಾಲಕೃಷ್ಣ ಆಗ್ರಹ

### ಸರ್ವ ಸದಸ್ಯರ ವಾರ್ಷಿಕ ಮಹಾಸಭೆ | ಷೇರುದಾರರಿಗೆ ಶೀಘ್ರ ಸಕ್ಕರೆ ವಿತರಣೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ಹೇಮಾವತಿ ಸಹಕಾರಿ ಸಕ್ಕರೆ ಕಾರ್ಖಾನೆ ಚುನಾವಣೆ ನಡೆಸುವಂತೆ ಹಲವು ಬಾರಿ ಸರ್ಕಾರಕ್ಕೆ ಆಡಳಿತ ಮಂಡಳಿ ಮನವಿ ಮಾಡಿದ್ದರೂ ಗಂಭೀರವಾಗಿ ಪರಿಗಣಿಸುತ್ತಿಲ್ಲ ಎಂದು ಶಾಸಕ ಸಿ.ಎನ್. ಬಾಲಕೃಷ್ಣ ಹೇಳಿದರು.

ತಾಲ್ಲೂಕಿನ ಶ್ರೀನಿವಾರಪುರ ಹೇಮಾವತಿ ಸಹಕಾರಿ ಸಕ್ಕರೆ ಕಾರ್ಖಾನೆ ಆವರಣದಲ್ಲಿ ಶನಿವಾರ ನಡೆದ ಪ್ರಸಕ್ತ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ಉದ್ಘಾಟಿಸಿ ಮಾತನಾಡಿದ ಅವರು, ಕಳೆದ ಸರ್ವ ಸದಸ್ಯರ ಸಭೆಯಲ್ಲಿ ಸಕ್ಕರೆ ವಿತರಣೆಗೆ ತೀರ್ಮಾನಿಸಲಾಗಿತ್ತು. ಅಂದು ಚುನಾವಣೆ ನಡೆಸಲು ಸರ್ಕಾರ ಮುಂದಾಗಿತ್ತು. ಹಾಗಾಗಿ ವಿತರಣೆ ಮಾಡಲಾಗಲಿಲ್ಲ ಎಂದರು. ಈಗಾಗಲೇ ಆಡಳಿತ ಮಂಡಳಿಯಿಂದ ಷೇರುದಾರರ ಮತಪಟ್ಟಿ ತಯಾರು ಮಾಡಿ ಸಹಕಾರ ಇಲಾಖೆಗೆ ನೀಡಲಾಗಿದೆ. ಈಗಲಾದರು ಚುನಾವಣೆ ಮಾಡಿದರೆ ಸಕ್ಕರೆ ವಿತರಣೆಗೆ ಅನುಕೂಲವಾಗುತ್ತದೆ ಎಂದರು.

ಚುನಾವಣೆ ಬಳಿಕ ಪ್ರತಿ ಷೇರುದಾರರಿಗೆ ತಲಾ 30 ಕೆ.ಜಿ. ಸಕ್ಕರೆ ವಿತರಿಸಲಾಗುವುದು. ಮುಂದಿನ ವಾರ ಸಹಕಾರ ಸಚಿವ ಲಕ್ಷ್ಮಣ ಸವದಿ ಶ್ರವಣಬೆಳಗೊಳಕ್ಕೆ ಭೇಟಿ ನೀಡಲಿದ್ದಾರೆ. ಆ ಸಂದರ್ಭದಲ್ಲಿ ಹೇಮಾವತಿ ಸಹಕಾರಿ ಸಕ್ಕರೆ ಕಾರ್ಖಾನೆ ಚುನಾವಣೆಯನ್ನು ನಡೆಸುವಂತೆ




ಮನವಿ ಮಾಡಲಾಗುವುದು. ಕಾರ್ಖಾನೆ ಷೇರುದಾರರಿಗೆ ಸಕ್ಕರೆ ವಿತರಿಸಲು ಈಗಾಗಲೆ 4.50 ಕೋ.ರೂ. ಮೀಸಲಿಡಲಾಗಿರುವುದನ್ನು ಗಮನಕ್ಕೆ ತರುವ ಮೂಲಕ ಷೇರುದಾರರಿಗೆ ಅನುಕೂಲ ಮಾಡಲಾಗುವುದು ಎಂದರು.

ಕಾರ್ಖಾನೆಗೆ ಹೆಚ್ಚು ಕಬ್ಬು ಪೂರೈಸುವ ರೈತರನ್ನು ರಾಷ್ಟ್ರೀಯ ಹಬ್ಬಗಳ ಆಚರಣೆಯಲ್ಲಿ ಸನ್ಮಾನಿಸಲಾಗುತ್ತಿದೆ. ಆ ಬದಲಿಗೆ ಕಾರ್ಖಾನೆಯಲ್ಲಿ ಸನ್ಮಾನಿಸಿದರೆ ಅರ್ಥಪೂರ್ಣವಾಗಿರುತ್ತದೆ ಎಂದರು.

ಟಿಎಪಿಸಿಎಂಎಸ್‌ನಿರ್ದೇಶಕ ಎಂ.ಆರ್. ಅನಿಲ್ ಮಾತನಾಡಿ, ಕಾರ್ಖಾನೆಗೆ ಹೆಚ್ಚು ಕಬ್ಬು ಸರಬರಾಜು ಮಾಡುವವರನ್ನು ಸರ್ವ ಸದಸ್ಯರ ಸಭೆಯಲ್ಲಿ ಸನ್ಮಾನಿಸುವಂತೆ ಮನವಿ ಮಾಡಿದ್ದೆ. ಅದನ್ನು ನಡಾವಳಿ ಪುಸ್ತಕದಲ್ಲಿ ನಮೂದಿಸಲಾಯಿತೇ ಹೊರತು ಅನುಷ್ಠಾನಗೊಳಿಸಲಿಲ್ಲ. ಈ ವರ್ಷವೂ ಕಬ್ಬು ಬೆಳೆಯುವ ರೈತರಿಗೆ ಸನ್ಮಾನ ಮಾಡಿಲ್ಲವೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಟಿಎಪಿಸಿಎಂಎಸ್ ನಿರ್ದೇಶಕ ರಮೇಶ್ ಮಾತನಾಡಿ, ಕಾರ್ಖಾನೆಗೆ ಸೇರಿರುವ 17 ಎಕರೆ ಭೂಮಿ ಪಟ್ಟಣಕ್ಕೆ ಹೊಂದಿಕೊಂಡಿದೆ. ಅದನ್ನು ರಕ್ಷಣೆ ಮಾಡಬೇಕು. ಆ ಸ್ಥಳದಲ್ಲಿ ರೈತರಿಗೆ ಅನುಕೂಲ ಆಗುವ ಕಾರ್ಖಾನೆ ತೆರೆಯುವಂತೆ ಕಳೆದ ಸಾಲಿನ ಸಭೆಯಲ್ಲಿ ಮನವಿ ಮಾಡಲಾಗಿತ್ತು. ಕೇಂದ್ರ ಬೃಹತ್ ಕೈಗಾರಿಕೆ ಸಚಿವ ಹೆಚ್.ಡಿ.ಕುಮಾರಸ್ವಾಮಿಯೊಂದಿಗೆ ಚರ್ಚಿಸಲಾಗುವುದು ಎಂದು ಹೇಳಿ ವರ್ಷ ಕಳೆದರೂ ಇದು ಕಾರ್ಯರೂಪಕ್ಕೆ ಬಂದಿಲ್ಲ ಎಂದರು.

ಕೃಷಿ ಪತ್ತಿನ ಸಹರಕಾ ಸಂಘದ ನಿರ್ದೇಶಕ ನಲ್ಲೂರು ಅನಿಲ್ ಮಾತನಾಡಿ, ಕಾರ್ಖಾನೆಯಿಂದ ಎಂಟು ಲಕ್ಷ ರೂ. ತೆರಿಗೆಯನ್ನು ನಲ್ಲೂರು ಗ್ರಾಮ ಪಂಚಾಯಿತಿಗೆ ಕಟ್ಟಸಲಾಗಿದೆ. ಆದರೂ ಗ್ರಾಮ ಪಂಚಾಯಿತಿ ವತಿಯಿಂದ ಬೆಳಕಿನ ವ್ಯವಸ್ಥೆ ಮಾಡಿಲ್ಲ, ಕಬ್ಬು ತುಂಬಿದ ಎತ್ತಿನ ಗಾಡಿ, ಟ್ರ್ಯಾಕ್ಟರ್ ನಿಲ್ಲುವ ಯಾರ್ಡ್ ಸಂಪೂರ್ಣ ಹಾಳಾಗಿದೆ. ಅದರಿಂದ ರೈತರು ಸಾಕಷ್ಟು ತೊಂದರೆ ಅನುಭವಿಸುತ್ತಿದ್ದಾರೆ. ಈ ಬಗ್ಗೆ ಆಡಳಿತ ಮಂಡಳಿ ಗಮನ ಹರಿಸಿಲ್ಲ ಎಂದು ಸಭೆ ಗಮನಕ್ಕೆ ತಂದರು.

ಶಾಸಕ ಬಾಲಕೃಷ್ಣ ಅವರು ಉತ್ತರಿಸಿ, ಗ್ರಾಮ ಪಂಚಾಯಿತಿಯಿಂದ ಒಂದು ತಿಂಗಳ ಒಳಗೆ ಕಾರ್ಖಾನೆ ಮುಂಭಾಗದ ಹೆದ್ದಾರಿಗೆ ಬೀದಿ ದೀಪ ಅಳವಡಿಸಲಾಗುವುದು. ಯಾರ್ಡ್ ರಿಪೇರಿಗೆ 45 ಲಕ್ಷ ರೂ. ಮೀಸಲಿಡಲಾಗಿದೆ ಎಂದರು.

ಆಡಳಿತ ಮಂಡಳಿ ಅಧ್ಯಕ್ಷ ಜಯರಾಂ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಕಾರ್ಖಾನೆ ನಿರ್ದೇಶಕರಾದ ಬಿ.ಸಿ.ಮಂಜುನಾಥ್, ನಾರಾಯಣಗೌಡ, ತೇಜಸ್ವಿ ಕಿರಣ್, ಜಯರಾಂ, ದೇವೇಗೌಡ, ಶಿವಣ್ಣ, ರವೀಶ್, ಯೋಗಾ ನಂಜುಂಡ, ರಾಜೇಗೌಡ, ನಾರಾಯಣ, ಭಾರತಿ, ಎಂ.ಆರ್.ಮಂಜುನಾಥ್, ಭಾರತಿ, ಲಕ್ಷ್ಮಿದೇವಿ, ರವಿ ಹಾಗೂ ಇತರರಿದ್ದರು.

## ಸೆ.28 ರಂದು ಕಾಂಗ್ರೆಸ್ ಪ್ರತಿಭಟನೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಕೇಂದ್ರ ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರನ್ನು ಕೂಡಲೇ ಹುದ್ದೆಯಿಂದ ವಜಾಗೊಳಿಸಿ, ಅವರ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು ಹಾಗೂ ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆಯನ್ನು ರದ್ದುಗೊಳಿಸಬೇಕು ಎಂದು ಆಗ್ರಹಿಸಿ ಸೆ.28 ರಂದು ನಗರದಲ್ಲಿ ಪ್ರತಿಭಟನೆ ನಡೆಸಲಾಗುವುದು ಎಂದು ಜಿಲ್ಲಾ ಕಾಂಗ್ರೆಸ್ ವಕ್ತಾರ ಎಸ್.ಮಂಜುನಾಥ್ ಶರ್ಮ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಶನಿವಾರ ಮಾತನಾಡಿ, ಮತದಾರರ ಪಟ್ಟಿಯ ಪರಿಷ್ಕರಣೆ ಸೇರಿದಂತೆ ಚುನಾವಣಾ ಆಯೋಗದ ಕಾರ್ಯವೈಖರಿ ಕುರಿತು ಇತ್ತೀಚಿನ ಬೆಳವಣಿಗೆಗಳು ಹಲವು ಪ್ರಶ್ನೆ ಹುಟ್ಟುಹಾಕಿವೆ. ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ನೇತೃತ್ವದ ಆಯೋಗದಲ್ಲಿ ಚುನಾವಣಾ ಆಯುಕ್ತರಾದ ಸುಖಬೀರ್ ಸಿಂಗ್ ಸಂಧು ಹಾಗೂ ವಿವೇಕ್ ಜೋಶಿ ಅವರು ಕಳೆದ 10 ತಿಂಗಳಲ್ಲಿ ವಿವಿಧ ನಿರ್ಧಾರಗಳ ಕುರಿತು 14 ಬಾರಿ ಲಿಖಿತ ಆಕ್ಷೇಪಣೆ ದಾಖಲಿಸಿದ್ದಾರೆ ಎಂಬ ವರದಿ ಬಂದಿವೆ ಎಂದು ತಿಳಿಸಿದರು. ಮತದಾರರ



ಸೇರ್ಪಡೆ, ಹೆಸರುಗಳ ಅಳಿಸುವಿಕೆ ಹಾಗೂ ಮರುಸ್ಥಾಪನೆ, ನಮೂನೆ 6 ಮತ್ತು ಮತದಾರರ ಡಿಜಿಟಲ್ ವ್ಯವಸ್ಥೆಗೆ ಸಂಬಂಧಿಸಿದ ವಿಚಾರಗಳಲ್ಲಿ ಆಕ್ಷೇಪಣೆ ದಾಖಲಿಸಲಾಗಿದೆ. ಕೆಲವು ನಿರ್ಧಾರಗಳನ್ನು ತಮ್ಮ ಗಮನಕ್ಕೆ ತರದೆ ಅಥವಾ ಅನುಮೋದನೆ ಪಡೆಯದೆ ಕೈಗೊಳ್ಳಲಾಗಿದೆ ಎಂದು ಇಬ್ಬರು ಚುನಾವಣಾ ಆಯುಕ್ತರು ಆಕ್ಷೇಪಿಸಿರುವುದು ವರದಿಯಾಗಿದೆ.

ಈ ಬೆಳವಣಿಗೆಗಳಿಂದ ಚುನಾವಣಾ ಆಯೋಗದ ಸ್ವಾಯತ್ತತೆ, ಪಾರದರ್ಶಕತೆ ಹಾಗೂ ನಿರ್ಧಾರ ಕೈಗೊಳ್ಳುವ ಪ್ರಕ್ರಿಯೆ ಕುರಿತು ಸಾರ್ವಜನಿಕ ವಲಯದಲ್ಲಿ ಚರ್ಚೆ ನಡೆಯುತ್ತಿದೆ. ಮತದಾರರ ಪಟ್ಟಿಯ ಪರಿಷ್ಕರಣೆಯ ಉದ್ದೇಶ ಅರ್ಹ ಮತದಾರರನ್ನು ಗುರುತಿಸಿ ಪಟ್ಟಿಯಲ್ಲಿ ಉಳಿಸುವುದಾಗಿರಬೇಕು. ಆದರೆ ಎಸ್‌ಐಆರ್ ಪ್ರಕ್ರಿಯೆಯಿಂದ ಅರ್ಹ ಮತದಾರರ ಹೆಸರುಗಳು ಪಟ್ಟಿಯಿಂದ ಹೊರಗುಳಿಯುವ ಆತಂಕವಿದೆ ಎಂದು ಅವರು ಆರೋಪಿಸಿದರು.

ಜಿಲ್ಲಾ ಕಾಂಗ್ರೆಸ್ ವಕ್ತಾರ ಸಲೀಂ ಕೊಲ್ಲಹಳ್ಳಿ ಮಾತನಾಡಿ, ದೇಶದಲ್ಲಿ 13 ಕೋಟಿ ಮತದಾರರನ್ನು ಹೊರಗಿಡಲಾಗಿದೆ. ಎಸ್‌ಐಆರ್ ಕಾನೂನುಬದ್ಧವಾಗಿ ನಡೆದಿದ್ದರೆ ಸ್ವಾಗತ, ಆದರೆ ದುರುದ್ದೇಶದಿಂದ ಹೊರಗೆ ಹಾಕಿ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮತದಾನದ ಹಕ್ಕಿಗೆ ಧಕ್ಕೆಯಾಗದಂತೆ ಕ್ರಮ ಕೈಗೊಳ್ಳಬೇಕು. ಚುನಾವಣಾ ಆಯೋಗದ ಕಾರ್ಯವೈಖರಿ ಕುರಿತು ಸಮಗ್ರ ತನಿಖೆ ನಡೆಸಬೇಕು ಎಂದು ಒತ್ತಾಯಿಸಿದರು. ಜ್ಞಾನೇಶ್ ಕುಮಾರ್ ಅವರನ್ನು ಹುದ್ದೆಯಿಂದ ವಜಾಗೊಳಿಸಿ ಅವರ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸಬೇಕು ಎಂದು ಪ್ರತಿಭಟನೆ ನಡೆಸಲಾಗುತ್ತಿದೆ ಎಂದರು.

# ಶವ ತೆಗೆದುಕೊಂಡು ಹೋಗದಂತೆ ಸ್ಥಳೀಯರ ಅಡ್ಡಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಕಲಗೂಡು: ಮನೆ ಮುಂದಿನ ರಸ್ತೆಯಲ್ಲಿ ಶವ ಸಾಗಿಸಲು ಅವಕಾಶ ನೀಡುವುದಿಲ್ಲವೆಂದು ಕೆಲವರು ವಿರೋಧ ವ್ಯಕ್ತಪಡಿಸಿದ ಹಿನ್ನಲೆಯಲ್ಲಿ ಮೃತದೇಹವನ್ನು ಒಂದೂವರೆ ಗಂಟೆ ರಸ್ತೆಯಲ್ಲೇ ಇರಿಸಿದ ಘಟನೆ ತಾಲ್ಲೂಕಿನ ಕೊಣನೂರು ಹೋಬಳಿ ಮಜ್ಜನಹಳ್ಳಿಯಲ್ಲಿ ನಡೆದಿದೆ.

ಗ್ರಾಮದ ಮಡಿವಾಳ ಜನಾಂಗಕ್ಕೆ ಸೇರಿದ ತಂಗ್ಯಮ್ಮ (60) ಅವರು ಗುರುವಾರ ರಾತ್ರಿ ಮೃತಪಟ್ಟಿದ್ದರು. ಶುಕ್ರವಾರ ಮೃತದೇಹವನ್ನು ಅಂತ್ಯ ಸಂಸ್ಕಾರಕ್ಕಾಗಿ ಸ್ಮಶಾನಕ್ಕೆ ಕೊಂಡೊಯ್ಯುವ ಸಂದರ್ಭದಲ್ಲಿ ಮನೆಯ ಮುಂದಿನ ರಸ್ತೆಯಲ್ಲಿ ಶವ ಸಾಗಿಸಲು ಬಿಡುವುದಿಲ್ಲವೆಂದು ಕೆಲ ಕುಟುಂಬಗಳು ವಿರೋಧ ವ್ಯಕ್ತಪಡಿಸಿದವು.

ಸ್ಥಳಕ್ಕೆ ಆಗಮಿಸಿದ 112 ಪೊಲೀಸರು ಪರಿಸ್ಥಿತಿಯನ್ನು ನಿಯಂತ್ರಿಸಿ ಪರ್ಯಾಯ ರಸ್ತೆಯ ಮೂಲಕ ಮೃತದೇಹವನ್ನು ಸ್ಮಶಾನಕ್ಕೆ ಸಾಗಿಸಲು ಅನುವು ಮಾಡಿಕೊಟ್ಟರು. ಶವ ಸಂಸ್ಕಾರಕ್ಕೆ ಅಗತ್ಯವಿದ್ದ ಸೌದೆಯನ್ನು ತರಲು ರಸ್ತೆಯಲ್ಲಿ ಅಡ್ಡಿಪಡಿಸಿದ ಸಂದರ್ಭದಲ್ಲೂ ಪೊಲೀಸರು ಮಧ್ಯ ಪ್ರವೇಶಿಸಿ ಸೌದೆ ತುಂಬಿದ್ದ



ಟ್ರ್ಯಾಕ್ಟರ್ ಅನ್ನು ಸ್ವತಃ ಚಲಾಯಿಸಿಕೊಂಡು ಬಂದು ಅಂತ್ಯ ಸಂಸ್ಕಾರಕ್ಕೆ ಅವಕಾಶ ಮಾಡಿ ಕೊಟ್ಟರು.

ಘಟನೆ ತಿಳಿದು ಸ್ಥಳಕ್ಕೆ ಭೇಟಿ ನೀಡಿದ ತಹಶೀಲ್ದಾರ್ ಕೆ.ಸಿ. ಸೌಮ್ಯ ಅವರು ಗ್ರಾಮಸ್ಥರೊಂದಿಗೆ ಚರ್ಚಿಸಿದರು. ಸರ್ಕಾರಿ ರಸ್ತೆಯಲ್ಲಿ ಮೃತದೇಹವನ್ನು ಸಾಗಿಸಲು ಯಾರೂ ಅಡ್ಡಿಪಡಿಸಬಾರದು ಎಂದರು.

ಸ್ಮಶಾನಕ್ಕೆ ತೆರಳುವ ರಸ್ತೆ ಸಂಪೂರ್ಣವಾಗಿ ಅಭಿವೃದ್ಧಿಯಾಗದೆ ಇರುವುದರಿಂದ ಸಮಸ್ಯೆ ಉಂಟಾಗಿದೆ. ವಿಜಿ-ಬಿ ರಾಮ್ ಜಿ ಯೋಜನೆಯಡಿ ರಸ್ತೆಯನ್ನು ಅಭಿವೃದ್ಧಿಪಡಿಸಿ ಸ್ಮಶಾನದ ವರೆಗೆ ಸುಗಮ ಸಂಪರ್ಕ ಕಲ್ಪಿಸಲಾಗುವುದೆಂದು ತಹಸೀಲ್ದಾರ್ ತಿಳಿಸಿದರು. ಮುಂದಿನ ದಿನಗಳಲ್ಲಿ ಇದೇ ರಸ್ತೆಯಲ್ಲಿ ಮೃತದೇಹಗಳನ್ನು ಸ್ಮಶಾನಕ್ಕೆ ಕೊಂಡೊಯ್ಯಲು ಅಡ್ಡಿಪಡಿಸಬಾರದೆಂದು ಗ್ರಾಮಸ್ಥರಿಗೆ ಸೂಚಿಸಿದರು.

ಇದೇ ಸಂದರ್ಭದಲ್ಲಿ ಗ್ರಾಮಸ್ಥರು ಸರ್ವೆ ನಂಬರ್ 28ರಲ್ಲಿರುವ ಜಮೀನುಗಳ ದಾಖಲೆಗಳನ್ನು ದುರಸ್ತಿ ಮಾಡಿಕೊಡಬೇಕು ಎಂದು ತಹಸೀಲ್ದಾರ್ ಗೆ ಮನವಿ ಮಾಡಿದರು.

ಅದಕ್ಕೆ ಪ್ರತಿಕ್ರಿಯಿಸಿದ ತಹಶೀಲ್ದಾರ್ ಸೌಮ್ಯ ಅವರು, ಈ ಪ್ರದೇಶದಲ್ಲಿ 9 ಜನರಿಗೆ ಜಮೀನು ಮಂಜೂರಾಗಿದ್ದು, ದಾಖಲಾತಿಗಳ ಕೊರತೆಯಿಂದ ದುರಸ್ತಿ ಕಾರ್ಯ ಪೂರ್ಣಗೊಂಡಿಲ್ಲ. ದರಖಾಸ್ತು ಪೋಡಿ ಆಂದೋಲನದ ಮೂಲಕ ದಾಖಲೆಗಳನ್ನು ಪರಿಶೀಲಿಸಿ ಅಗತ್ಯ ಕ್ರಮ ಕೈಗೊಂಡು ಸಮಸ್ಯೆ ಪರಿಹರಿಸಲಾಗುವುದೆಂದು ಭರವಸೆ ನೀಡಿದರು.

ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ವಿಜಯಕುಮಾರ್ ಅವರು ಮಾತನಾಡಿ, ಮೂಢನಂಬಿಕೆಯ ಕಾರಣದಿಂದ ಕೆಲವರು ಈ ರಸ್ತೆಯಲ್ಲಿ ಶವವನ್ನು ಕೊಂಡೊಯ್ಯಬಾರದು ಎಂದು ವಿರೋಧ ವ್ಯಕ್ತಪಡಿಸಿದ್ದಾರೆ. ಈ ರಸ್ತೆಯ ಬದಲಾಗಿ ಬೇರೆ ರಸ್ತೆಯನ್ನು ನಿರ್ಮಿಸಿಕೊಂಡು ಅದರ ಮೂಲಕವೇ ಶವಗಳನ್ನು ಸ್ಮಶಾನಕ್ಕೆ ಕೊಂಡೊಯ್ಯಬೇಕು ಎಂಬುದು ಅವರ ಒತ್ತಾಯವಾಗಿದೆ ಎಂದು ತಿಳಿಸಿದರು.

# ಇಂದು ಲೋಕ ಕಲ್ಯಾಣಾರ್ಥ ಇಷ್ಟಲಿಂಗ ಪೂಜೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಸೀಕೆರೆ: ಲೋಕ ಕಲ್ಯಾಣಾರ್ಥವಾಗಿ ಪ್ರತಿ ವರ್ಷದಂತೆ ಈ ವರ್ಷವೂ ಸಹ ನಡೆಯುತ್ತಿರುವ ಕಾಡಸಿದ್ದೇಶ್ವರ ಮಠದ ಡಾ. ಕರಿವೃಷಭ ಶಿವಯೋಗೇಶ್ವರ ಸ್ವಾಮೀಜಿ ಇಷ್ಟಲಿಂಗ ಮಹಾಪೂಜೆ ಮತ್ತು ಭಕ್ತರಿಗೆ ಧರ್ಮ ಸಂದೇಶ ಸೆ. 27ರಂದು ಪ್ರಸನ್ನ ಗಣಪತಿ ಆಸ್ಥಾನ ಮಂಟಪದಲ್ಲಿ ನಡೆಯಲಿದೆ ಎಂದು ಶ್ರೀ ಪ್ರಸನ್ನ ಗಣಪತಿ ಭಕ್ತ ಮಂಡಳಿ ತಿಳಿಸಿದೆ.

ಇಷ್ಟಲಿಂಗ ಮಹಾಪೂಜೆಯು ಭಾನುವಾರ ಬೆಳಿಗ್ಗೆ 9 ಗಂಟೆಗೆ ಪೂಜ್ಯ ಶ್ರೀಗಳು ನೆರವೇರಿಸುತ್ತಿದ್ದು ಇದನ್ನು ಕಣ್ತುಂಬಿಕೊಳ್ಳುವ ಅಪೇಕ್ಷೆ ಇರುವ ಭಕ್ತರು ಶ್ರದ್ಧಾ ಭಕ್ತಿಯೊಂದಿಗೆ ಸಾಂಪ್ರದಾಯಿಕ ಉಡುಗೆ ತೊಡುಗೆಯೊಂದಿಗೆ ಪಾಲ್ಗೊಳ್ಳುವ ಮೂಲಕ ಪ್ರಸನ್ನ ಗಣಪತಿ ಅನುಗ್ರಹ ಸಮೇತ ಇಷ್ಟಲಿಂಗದ ಆರಾಧನೆಯ




ಫಲ ಪಡೆಯುವಂತೆ ಭಕ್ತ ಮಂಡಳಿ ತನ್ನ ಪ್ರಕಟಣೆಯಲ್ಲಿ ಕೋರಿದೆ.

ಇಷ್ಟಲಿಂಗ ಮಹಾಪೂಜೆಯ ಬಳಿಕ ಭಕ್ತಾದಿಗಳಿಗೆ ಶ್ರೀಗಳು ಆಶೀರ್ವಚನ ನೀಡಲಿದ್ದು ನಂತರ ಪ್ರಸನ್ನ ಗಣಪತಿಯವರಿಗೆ ಮಹಾಮಂಗಳಾರತಿ ನೆರವೇರಲಿದೆ. ಲೋಕ ಕಲ್ಯಾಣಾರ್ಥ ನಡೆಯುತ್ತಿರುವ ಇಷ್ಟಲಿಂಗ ಮಹಾಪೂಜೆ ಹಾಗೂ ಧರ್ಮ ಸಂದೇಶ ಧಾರ್ಮಿಕ ಸಮಾರಂಭದಲ್ಲಿ ವೀರಶೈವ ಲಿಂಗಾಯತ ಸಮಾಜ ಬಂದುಗಳು ಸೇರಿದಂತೆ ತಾಲೂಕಿನ ಸಮಸ್ತ ಭಕ್ತರು ಪಾಲ್ಗೊಳ್ಳುವಂತೆ ತಾಲೂಕು ವೀರಶೈವ ಲಿಂಗಾಯಿತ ಸಮಾಜ ಕೂಡ ಮನವಿ ಮಾಡಿದೆ.

# ಬೇಲೂರು ತಾಲ್ಲೂಕು ಜೆಡಿಎಸ್ ಅಧ್ಯಕ್ಷರಾಗಿ ಲೋಕೇಗೌಡ ಆಯ್ಕೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಬೇಲೂರು: ಜೆಡಿಎಸ್ ತಾಲ್ಲೂಕು ಘಟಕದ ಅಧ್ಯಕ್ಷರಾಗಿ ಲೋಕೇಗೌಡ ಅವರು ಅವಿರೋಧ ಆಯ್ಕೆಯಾಗಿದ್ದಾರೆ.

ಬೆಂಗಳೂರಿನಲ್ಲಿ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಹೆಚ್.ಡಿ.ದೇವೇಗೌಡ ಅವರ ನಿವಾಸದಲ್ಲಿ ಇತ್ತೀಚೆಗೆ ನಡೆದ ಕಾರ್ಯಕ್ರಮದಲ್ಲಿ ನೂತನ ಪದಾಧಿಕಾರಿಗಳ ಆಯ್ಕೆ ನಡೆಯಿತು.

ನೂತನ ತಾಲ್ಲೂಕು ಅಧ್ಯಕ್ಷ ಲೋಕೇಗೌಡ ಮಾತನಾಡಿ, ತಮ್ಮ ಮೇಲೆ ವಿಶ್ವಾಸವಿಟ್ಟು ಜವಾಬ್ದಾರಿ ನೀಡಿರುವ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ ಅವರು, ಮಾಜಿ ಸಚಿವ ಹೆಚ್.ಡಿ. ರೇವಣ್ಣ, ಭವಾನಿ ರೇವಣ್ಣ ಸೇರಿ ಪಕ್ಷದ ಹಿರಿಯರು, ಜಿಲ್ಲಾ ನಾಯಕರು ಹಾಗು ತಾಲ್ಲೂಕು ಮತ್ತು ಗ್ರಾಮ ಮಟ್ಟದ ಕಾರ್ಯಕರ್ತರಿಗೆ ಕೃತಜ್ಞತೆ ಸಲ್ಲಿಸಿದರು.



ಪಕ್ಷದ ಸಿದ್ಧಾಂತ, ತತ್ವ ಹಾಗು ಸಂಘಟನೆಯ ಮೇಲೆ ನಂಬಿಕೆ ಇಟ್ಟು ನನಗೆ ನೀಡಿರುವ ಜವಾಬ್ದಾರಿ ನಿರ್ವಹಿಸುತ್ತೇನೆ. ಹಿರಿಯರ ಮಾರ್ಗದರ್ಶನ ಹಾಗೂ ಕಾರ್ಯಕರ್ತರ ಸಹಕಾರದೊಂದಿಗೆ ಬೇಲೂರು ತಾಲ್ಲೂಕಿನಲ್ಲಿ ಪಕ್ಷದ ಸಂಘಟನೆಯನ್ನು ಮತ್ತಷ್ಟು ಬಲಪಡಿಸುವುದು ಗುರಿಯಾಗಿದೆ ಎಂದು ಹೇಳಿದರು.

ತಾಲ್ಲೂಕಿನ ಪ್ರತಿಯೊಂದು ಹೋಬಳಿ, ಗ್ರಾಮ ಹಾಗೂ ಬೂತ್ ಮಟ್ಟದಲ್ಲಿ ಪಕ್ಷದ ಸಂಘಟನೆಯನ್ನು ಬಲಪಡಿಸಲು ಆದ್ಯತೆ ನೀಡಲಾಗುವುದು. ಬಹುಕಾಲದಿಂದ ಪಕ್ಷಕ್ಕಾಗಿ ದುಡಿದ ಹಿರಿಯ ಕಾರ್ಯಕರ್ತರ ಅನುಭವವನ್ನು ಪಡೆದು ಯುವಕರು ಹಾಗು ಹೊಸ ಮುಖಗಳನ್ನು ಸಂಘಟನೆಯಲ್ಲಿ ತೊಡಗಿಸಿಕೊಳ್ಳಲಾಗುವುದು. ಕಾರ್ಯಕರ್ತರೇ ಪಕ್ಷದ ನಿಜವಾದ ಶಕ್ತಿಯಾಗಿದ್ದು, ಎಲ್ಲರನ್ನು ಒಗ್ಗೂಡಿಸಿಕೊಂಡು ಸಂಘಟನೆ ಬಲಪಡಿಸಲಾಗುವುದು ಎಂದರು.

ಮುಂಬರುವ ಚುನಾವಣೆಗಳನ್ನು ಗಮನದಲ್ಲಿಟ್ಟುಕೊಂಡು ಗ್ರಾಮ ಮಟ್ಟದಿಂದಲೇ ಪಕ್ಷದ ಸಂಘಟನೆಯನ್ನು ವ್ಯವಸ್ಥಿತವಾಗಿ ರೂಪಿಸಲಾಗುವುದು. ಮುಖಂಡರು ಹಾಗು ಕಾರ್ಯಕರ್ತರ ನಡುವೆ ಸಮನ್ವಯ ಸಾಧಿಸಿ ಭಿನ್ನಾಭಿಪ್ರಾಯಗಳಿಗೆ ಅವಕಾಶ ನೀಡದೆ ಒಗ್ಗಟ್ಟಿನಿಂದ ಪಕ್ಷ ಸಂಘಟನೆ ಮಾಡಲಾಗುವುದೆಂದರು.

ಹೆಚ್‌ಡಿಸಿಸಿ ಬ್ಯಾಂಕ್ ನಿರ್ದೇಶಕ ಎಂ.ಎ.ನಾಗರಾಜ್ ಮಾತನಾಡಿ, ಲೋಕೇಗೌಡ ಅವರು ಪಕ್ಷ ಸಂಘಟನೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡು ಕಾರ್ಯಕರ್ತರೊಂದಿಗೆ ಉತ್ತಮ ಬಾಂಧವ್ಯ ಹೊಂದಿದ್ದಾರೆ. ಅವರ ನೇತೃತ್ವದಲ್ಲಿ ಬೇಲೂರು ತಾಲ್ಲೂಕಿನಲ್ಲಿ ಜೆಡಿಎಸ್ ಸಂಘಟನೆ ಮತ್ತಷ್ಟು ಬಲಿಷ್ಟವಾಗಲಿದೆ ಎಂಬ ವಿಶ್ವಾಸವಿದೆ. ಪಕ್ಷದ ಹಿರಿಯರು ಹಾಗು ಕಾರ್ಯಕರ್ತರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಸಂಘಟನೆಯನ್ನು ಮುನ್ನಡೆಸುವಂತೆ ಶುಭ ಹಾರೈಸಿದರು.

ಮಾಜಿ ಶಾಸಕ ಕೆ.ಎಸ್.ಲಿಂಗೇಶ್, ಹೆಚ್.ಕೆ.ಕುಮಾರಸ್ವಾಮಿ, ಹೆಚ್ ಡಿಸಿಸಿ ಬ್ಯಾಂಕ್ ಜಿಲ್ಲಾ ನಿರ್ದೇಶಕ ಎಂ.ಎ.ನಾಗರಾಜು, ಬಲ್ಲೇನಹಳ್ಳಿ ರವಿಕುಮಾರ್, ಅದ್ದೂರಿ ಚೇತನ್, ಮಹದೇವ್ ಇತರರಿದ್ದರು.

# ಯುವ ಪೀಳಿಗೆ ಮಾದಕ ಪದಾರ್ಥಗಳಿಂದ ದೂರವಿರಬೇಕು



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಯುವ ಪೀಳಿಗೆ ಮಾದಕ ವಸ್ತುಗಳಿಂದ ದೂರವಿರುವ ಮೂಲಕ ಉತ್ತಮ ಆರೋಗ್ಯ ಕಾಪಾಡಿಕೊಂಡು ಸಮಾಜದಲ್ಲಿ ಉತ್ತಮ ವ್ಯಕ್ತಿಗಳಾಗಬೇಕು ಎಂದು ಮೈ ಭಾರತ್ ಕೇಂದ್ರದ ಜಿಲ್ಲಾ ಯುವ ಅಧಿಕಾರಿ ಇ.ಎಸ್.ಜಿತ್ಯಾ ಹೇಳಿದರು.

ನಗರದ ಆರ್.ಸಿ. ರಸ್ತೆ ಗಂಧದಕೋಠಿ ಆವರಣದ ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಮಹಿಳಾ ಘಟಕ, ಮೈ ಭಾರತ್ ಕೇಂದ್ರದ ವತಿಯಿಂದ ಶನಿವಾರ ನಶಾಮುಕ್ತ ಅಭಿಯಾನದ ಅಂಗವಾಗಿ ಹಮ್ಮಿಕೊಂಡಿದ್ದ ನಮ್ಮ ಆರೋಗ್ಯ, ನಮ್ಮ ಹೆಮ್ಮೆ ಎಂಬ ವಿಷಯದ ಕುರಿತ ವಿಶೇಷ ಉಪನ್ಯಾಸ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಮಾದಕ ವಸ್ತುಗಳ ವ್ಯಸನದಿಂದ ಇಂದು ಅನೇಕ ಯುವಕ-ಯುವತಿಯರು ತಮ್ಮ ಜೀವನವನ್ನು ಹಾಳು ಮಾಡಿಕೊಳ್ಳುತಿದ್ದು, ಚಿಕ್ಕ ವಯಸ್ಸಿಗೆ ತಮ್ಮ ಪ್ರಾಣ ಕಳೆದುಕೊಳ್ಳುವ ಹಂತಕ್ಕೆ ತಲುಪುತಿದ್ದಾರೆ. ವಿಶೇಷವಾಗಿ ಯುವತಿಯರು ಕೂಡ ಇಂತಹ ಮಾದಕ ವ್ಯಸನಕ್ಕೆ ದಾಸರಾಗುತ್ತಿರುವುದು ಆತಂಕಕಾರಿ ಸಂಗತಿ ಹಾಗಾಗಿ ಯುವತಿಯರು ಯಾವುದೇ ಆಮಿಷೆಗಳಿಗೆ ಒಳಗಾಗದೆ ಉತ್ತಮ ಶಿಕ್ಷಣ ಪಡೆದುಕೊಳ್ಳುವ ಮೂಲಕ ತಮ್ಮ ಜೀವನವನ್ನು ಕಟ್ಟಿಕೊಳ್ಳಬೇಕು ಎಂದರು.

ಅಧ್ಯಕ್ಷತೆ ವಹಿಸಿದ್ದ ಕಾಲೇಜು ಪ್ರಾಂಶುಪಾಲ ಡಿ.ಕೆ. ಮಂಜಯ್ಯ ಮಾತನಾಡಿ, ಡ್ರಗ್ಸ್‌ನ ಜಾಲಕ್ಕೆ ಇಂದು ಯುವಕರು ಬಹಳ ಬೇಗ ಆಕರ್ಷಿತರಾಗಿ ತಮ್ಮ ಭವಿಷ್ಯವನ್ನು ಯುವ ಸಮುದಾಯ ಹಾಳು ಮಾಡಿಕೊಳ್ಳುತ್ತಿದ್ದಾರೆ. ಇದರ ಸೇವನೆ ಮಾಡಿದವರು ತಮಗೆ ಅರಿವಿಲ್ಲದೆ ಅನೇಕ ಅಪರಾಧ ಕೃತ್ಯಗಳಲ್ಲಿ ಭಾಗಿಯಾಗಿ ಚಿಕ್ಕ ವಯಸ್ಸಿಗೆ ಜೈಲು ಸೇರುತ್ತಿರುವ ಸಂಗತಿಗಳನ್ನು ನೋಡಬಹುದಾಗಿದೆ. ಯುವಕ/ಯುವತಿಯರು ತಮ್ಮ ಪೋಷಕರ ಕನಸುಗಳನ್ನು ಸಕಾರಗೊಳಿಸುವ ನಿಟ್ಟಿನಲ್ಲಿ ನಡೆದುಕೊಳ್ಳಬೇಕು. ಸಮಾಜದಲ್ಲಿ ಉತ್ತಮ ವ್ಯಕ್ತಿಗಳಾಗಿ ಜೀವನ ರೂಪಿಸಿಕೊಂಡು, ಗುರು, ಹಿರಿಯರಿಗೆ ಹಾಗೆಯೇ ತಮ್ಮ ಪೋಷಕರಿಗೆ ಒಳ್ಳೆಯ ಹೆಸರು ತರುವ ಕೆಲಸವನ್ನು ಮಾಡಬೇಕು. ಮಾದಕ ವಸ್ತುಗಳಿಂದ ಸಾಧ್ಯವಾದಷ್ಟು ದೂರವಿರಬೇಕು, ಹಾಗೆಯೇ ಮಾದಕ ವ್ಯಸನಿಗಳಿಂದ ಯುವ ಸಮುದಾಯ ದೂರವಿರಬೇಕು ಎಂದು ಹೇಳಿದರು.

ಕಾರ್ಯಕ್ರಮದ ಅಂಗವಾಗಿ ಕಾಲೇಜಿನ ವಿದ್ಯಾರ್ಥಿನಿಯರಿಗೆ ಹಮ್ಮಿಕೊಳ್ಳಲಾಗಿದ್ದ ಆರೋಗ್ಯ ತಪಾಸಣೆ ಶಿಬಿರದಲ್ಲಿ ವೈದ್ಯೆ ಡಾ.ಶಿಫಾನಾ ಯಾಸ್ಮಿನ್ ಹಾಗೂ ಮೊಸಳೆಹೊಸಳ್ಳಿ ಸಮುದಾಯ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಗಳ ತಂಡ ವಿದ್ಯಾರ್ಥಿನಿಯರಿಗೆ ಆರೋಗ್ಯ ತಪಾಸಣೆ ನಡೆಸಿದರು.

ಐ.ಕ್ಯೂ.ಎ.ಸಿ. ಸಂಚಾಲಕ ಕಾಂತೇಶ ಸಣ್ಣಿಂಗಮ್ಮ, ಮಹಿಳಾ ಘಟಕದ ಸಂಚಾಲಕಿ ಹೇಮಾವತಿ ಎಂ.ವಿ., ಅಧ್ಯಾಪಕರಾದ ಮೋಹನ್ ಕುಮಾರ್ ಹಾಗೂ ಇತರರು ಹಾಜರಿದ್ದರು.

# ಹೆಚ್ಚಿನ ಪರಿಹಾರಕ್ಕೆ ಎತ್ತಿನಹೊಳೆ ಯೋಜನೆ ಸಂತ್ರಸ್ತರ ಮನವಿ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಎತ್ತಿನಹೊಳೆ ಯೋಜನೆಗೆ ಜಮೀನು ಕಳೆದುಕೊಳ್ಳುತ್ತಿರುವ ರೈತರಿಗೆ ಸೂಕ್ತ ಪರಿಹಾರ ನೀಡದೆ ಕಾಮಗಾರಿ ನಡೆಸಲಾಗುತ್ತಿದೆ. ಕೂಡಲೇ ನ್ಯಾಯ ಒದಗಿಸಬೇಕು ಎಂದು ಬೇಲೂರು ತಾಲ್ಲೂಕಿನ ಗಂಗೂರು ಗ್ರಾಮದ ಸಂತ್ರಸ್ತ ರೈತರು ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಿದರು.

ಈ ವೇಳೆ ಮಾತನಾಡಿದ ರೈತ ಜಿ.ಎಸ್.ರಮೇಶ್ ಅವರು, 2018ರಲ್ಲಿ ಎತ್ತಿನಹೊಳೆ ಯೋಜನೆಗೆ ಸಂಬಂಧಿಸಿದ ಅಧಿಕಾರಿಗಳು ಗ್ರಾಮಕ್ಕೆ ಆಗಮಿಸಿ, ಯೋಜನೆ ವ್ಯಾಪ್ತಿಗೆ ಬರುವ ಜಮೀನಿಗೆ ಸೂಕ್ತ ಪರಿಹಾರ ನೀಡುವುದಾಗಿ ಭರವಸೆ ನೀಡಿ ಜಮೀನು ಪಡೆದುಕೊಂಡಿದ್ದರು. ಆದರೆ, ಬಳಿಕ ಹಲವು ರೈತರ ಸರ್ವೆ ನಂಬರ್‌ಗಳಲ್ಲಿ ಬದಲಾವಣೆ ಹಾಗೂ ದೋಷಗಳಿರುವುದು ಕಂಡುಬಂದಿದೆ. ಅವುಗಳನ್ನು ಸರಿಪಡಿಸುವ ಜವಾಬ್ದಾರಿ ನಮ್ಮದೇ ಎಂದು ಅಧಿಕಾರಿಗಳು ಭರವಸೆ ನೀಡಿದ್ದರು. ಆದರೆ ಎಂಟು ವರ್ಷ ಕಳೆದರೂ ಸಮಸ್ಯೆ ಬಗೆಹರಿದಿಲ್ಲ ಎಂದು ಆರೋಪಿಸಿದರು.

ಯೋಜನೆ ವ್ಯಾಪ್ತಿಯಲ್ಲಿ ಸುಮಾರು 145 ರೈತರ ಜಮೀನುಗಳ ಸರ್ವೆ ನಂಬರ್‌ಗಳಲ್ಲಿ ದೋಷಗಳಿದ್ದು, ಇದಕ್ಕೆ ರೈತರು ಹೊಣೆಯಲ್ಲ. ಕಂದಾಯ ಇಲಾಖೆ ಹಾಗೂ ಸಂಬಂಧಪಟ್ಟ ಅಧಿಕಾರಿಗಳಿಂದಲೇ ಸಮಸ್ಯೆ ಉಂಟಾಗಿದ್ದು, ಮೊದಲು ದಾಖಲೆಗಳನ್ನು ಸರಿಪಡಿಸಿ, ನಂತರ ಸೂಕ್ತ ಪರಿಹಾರ ನೀಡಬೇಕು. ಇದೀಗ ಅಧಿಕಾರಿಗಳು ದಯಾ ಪರಿಹಾರವೆಂಬ ಹೆಸರಿನಲ್ಲಿ ಪ್ರತಿಯೊಬ್ಬರಿಗೂ ಸುಮಾರು 2.5 ಲಕ್ಷ ಪರಿಹಾರ ಪಡೆಯುವಂತೆ ಒತ್ತಡ ಹೇರುತ್ತಿದ್ದಾರೆ. ಈ ಮೊತ್ತಕ್ಕೆ ರೈತರ ಒಪ್ಪಿಗೆ ಇಲ್ಲ. ಸೂಕ್ತ ಪರಿಹಾರ ನೀಡಿದ ಬಳಿಕವೇ ಜಮೀನಿನಲ್ಲಿ ಕಾಮಗಾರಿ ನಡೆಸಬೇಕು ಎಂದು ಆಗ್ರಹಿಸಿದರು.

ತಮ್ಮ ಮೂರು ಎಕರೆ ಐದು ಗುಂಟೆ ಪಿತ್ರಾರ್ಜಿತ ಜಮೀನು ಯೋಜನೆಗೆ ಒಳಪಡುತ್ತಿದ್ದು, ಅದನ್ನೇ ಅವಲಂಬಿಸಿರುವ ಮೂರು ಕುಟುಂಬಗಳ ಹಲವು ಸದಸ್ಯರು ಜೀವನ ನಡೆಸುತ್ತಿದ್ದಾರೆ. ಜಮೀನು ಸಂಪೂರ್ಣ ಕಳೆದುಕೊಂಡರೆ ಕುಟುಂಬಗಳು ಸಂಕಷ್ಟಕ್ಕೆ ಸಿಲುಕಲಿವೆ. ಆದ್ದರಿಂದ ಜಮೀನಿಗೆ ನ್ಯಾಯಯುತ ಪರಿಹಾರ ನೀಡಬೇಕು ಎಂದು ರಮೇಶ್ ಮನವಿ ಮಾಡಿದರು. ಇದರ ನಡುವೆ ಅಧಿಕಾರಿಗಳು ಏಕಾಏಕಿ ಜಮೀನಿಗೆ ಆಗಮಿಸಿ ತೆಂಗಿನ ಮರಗಳನ್ನು ಕಡಿದು ಹಾಕಿರುವುದು ರೈತರ ಆಕ್ರೋಶಕ್ಕೆ ಕಾರಣವಾಗಿದೆ. ಮರಗಳಲ್ಲಿ ಫಸಲು ಇದ್ದರೂ ಯಾವುದೇ ಮುನ್ನೆಚ್ಚರಿಕೆ ಅಥವಾ ಸಮರ್ಪಕ ಮಾಹಿತಿ ನೀಡದೆ ಮರಗಳನ್ನು ತೆರವುಗೊಳಿಸಲಾಗಿದೆ ಎಂದು ದೂರಿದರು.

ಪರಿಹಾರ ನೀಡದೆ ಕಾಮಗಾರಿ ಮುಂದುವರಿಸಿದರೆ ರೈತರಿಗೆ ಅನ್ಯಾಯವಾಗಲಿದೆ. ಸರ್ಕಾರ ಹಾಗೂ ಜಿಲ್ಲಾಡಳಿತ ಮಧ್ಯಪ್ರವೇಶಿಸಿ ನ್ಯಾಯ ಒದಗಿಸಬೇಕು ಎಂದು ಮನವಿ ಮಾಡಿ ಒತ್ತಾಯಿಸಿದರು. ಗಂಗೂರು ಗ್ರಾಮದ ರಾಕೇಶ್ ಇತರರು ಉಪಸ್ಥಿತರಿದ್ದರು.

# ಸ್ಕೂಲಿಗೇ ಇಟ್ಟ ಉಲ್ಲನ್ ಬಾಂಬು!!!-3

**- ಧನಂಜಯ ಜೀವಾಳ**

ಅದೊಂದು ದಿನ ಊರಬಾಗಿಲ ಬಳಿ ಬಂದು ನಿಂತ ಜೀಪನ್ನು ನೋಡಿ ದಸರಾ ರಜೆಯಿಂದ ಊರ ತುಂಬೆಲ್ಲಾ ಚಲ್ಲಾಪಿಲ್ಲಿಯಾಗಿ ಆಟವಾಡ್ಕಂಡು ಅಂಡಲೆಯುತ್ತಿದ್ದ ಮಕ್ಕಳೆಲ್ಲ 'ಓ..........' ಎಂದು ಓಡಿಬಂದು ಜೀಪನ್ನು ಸುತ್ತುವರೆದವು. ಜೀಪಿನಿಂದ ಕೆಳಗಿಳಿದ ಫೀಲ್ಡಾಫಿಸರ್ ರಾಜಕುಮಾರ ಜೀಪನ್ನ ಸುತ್ತುವರೆದ ಮಕ್ಕಳನ್ನು ''ಏನ್ರಪ್ಪಾ ಇಲ್ಲಿ ಡಿಕಾಕ್ಷಮೂರ್ತಿ ಮನೆ ಯಾವುದ್ರಪ್ಪ?'' ಇದ್ಯಾವುದೋ ಚಿತ್ರವಿಚಿತ್ರ ಹೆಸರು ಕೇಳಿದ ಮಕ್ಕಳು ಫೀಲ್ಡಾಫಿಸರ್‌ನೆಡೆಗೆ ಸಂಶಯ ಹಾಗೂ ಭಯದಿಂದ ನೋಡಿ ಈ ಮನುಷ್ಯನ ಸಹವಾಸವೇ ಬೇಡ ಎನ್ನುತ್ತಾ 'ಏ ಓಡ್ರಾ ಓಡಾ', ಎನ್ನುತ್ತಾ ಫೇರಿಕಿತ್ತರು. ಸ್ಕೂಲುಮನೆಯ ಕಟ್ಟೆಯೊಳಗಡೆ ಇಸ್ಪೀಟಾಡುತಿದ್ದ ಎಂಟ್ಹತ್ತು ಯುವಕರ ಗುಂಪೊಂದು ಜೀಪನ್ನು ನೋಡಿದ ಕೂಡಲೇ ಕೈಲಿದ್ದ ಎಲೆಗಳನ್ನು ಬಿಸಾಕಿದವರೇ ಓಣಿಓಣಿಗಳನ್ನು ನುಗ್ಗಿ ಬೇಲಿ ಹಾರಿ ದಿಕ್ಕಾಪಾಲಾದರು. ಅದರಲ್ಲೊಬ್ಬನ ಚೌಕುಳಿ ಚೌಕುಳಿ ಚಿತ್ರದ ಲುಂಗಿಯು ಬೇಲಿಯ ಮುಳ್ಳಿಗೆ ಸಿಲುಕಿ, ಅಲ್ಲೇ ಉಳಿದು, ಮುಕುಳಿಯ ಬಳಿ ಮೂರು ತೂತವಾಗಿದ್ದ ಟ್ರಾನ್ಸ್‌ಕ್ಸ್ ಅಂಡರ್ವೇರಿನಲ್ಲಿಯೇ ಸತ್ತೆನೋ ಕೆಟ್ಟೆನೋ ಎಂದು ಪಲಾಯನಗೈದಿದ್ದ. ಅಲ್ಲೇ ದೇವಸ್ಥಾನದ ಎದುರಿನ ಅರಳೀಮರದ ಕೆಳಗಿನ ಕಲ್ಲಿನ ಬೆಂಚಿನ ಮೇಲೆ ಮೋಟುಬೀಡಿಯನ್ನು ಸೇದುತ್ತಾ ಕಾಖಿಚಡ್ಡಿಯ ಮೂಲಕ ಹೊರಚಾಚಿದ್ದ ಬತ್ತಿಹೋಗಿದ್ದ ತೊಡೆಗಳನ್ನು ಕೆರೆದುಕೊಳ್ಳುತಿದ್ದ ಮೂವರು ಮುದುಕರು ಕುತ್ತಿಗೆ ನಿಗುರಿಸಿ ಅದೇನು ಸದ್ದೆಂದು ಹುಬ್ಬೆತ್ತಿ ನೋಡಿದರು. ಅವರಲ್ಲಿಗೆ ನಡೆದುಹೋದ ಫೀಲ್ಡಾಫಿಸರ್ ರಾಜಕುಮಾರ ''ಏನ್ರಪ್ಪಾ ಇಲ್ಲಿ ಡಿಕಾಕ್ಷಮೂರ್ತಿ ಮನೆ ಯಾವುದ್ರಪ್ಪ?'' ಎಂದು ಕೇಳಿದರು. 'ಆ?..ಇ??'' ಎಂದು ಬೊಚ್ಚುಬಾಯಿಯಗಲಿಸಿ ಪ್ರಶ್ನಾರ್ಥಕವಾಗಿ ನೋಡಿದರಾ ತ್ರಿಮೂರ್ತಿಗಳು.

''ಡಿಕಾಕ್ಷಮೂರ್ಥೀ, ಸನ್ ಆಫ್ ತಿಮ್ಸೆಟ್ಟಿ.......!!''

''ಓ ಇಸ್ಪೀಟ್ ತಿಮ್ಮಾ....... ಇಂಗೇ ಈ ಪಕ್ಕದ್ ಓಣೀಲಿ ನೆಡ್ಕಂಡ್ ಹೋಗಿ, ಅಲ್ಲೊಂದ್ ಮನೇ ಮುಂದೆ ಎರಡ್ ತೆಂಗಿನ್ ಮರಾ ಇದಾವೆ. ಅದೇ ಮನೆ'' ಎಂದರು ಆ ಮೂವರಲ್ಲೊಬ್ಬರು. ಬಿಟ್ಟರೆ ಸಿಕ್ಕ ಎಂದುಕೊಂಡ ರಾಜಕುಮಾರ ಸೀದಾ ಚಕಚಕನೇ ಆ ತೆಂಗಿನಮರದ ಮನೆಯ ಬಳಿಗೆ ಹೋದ. ಮನೆಯ ಮುಂದಿನ ಗೂಟಕ್ಕೆ ಕಟ್ಟಿದ್ದ



ಎಮ್ಮೆಕರುವನ್ನು ಬಿಚ್ಚಿಕೊಂಡು ಹೊಲಕ್ಕೆ ಹೊಡೆದುಕೊಂಡು ಹೋಗುವ ತರಾತುರಿಯಲ್ಲಿದ್ದ ಹೆಂಗಸೊಂದು ಯಾರಿದು ಆಗಂತುಕರೆಂದು ಪ್ರಶ್ನಾರ್ಥಕವಾಗಿ ನೋಡಿದಳು. ''ಡಿಕಾಕ್ಷಮೂರ್ತಿ, ಸನ್ ಆಫ್ ತಿಮ್ಸೆಟ್ಟಿ ಅವರ ಮನೆ ಇದೇನಾ?''

'' ಹೌದು, ಯಾಕೆ? ಏನಾಗಬೇಕು?'' ''ನಾನು ಬ್ಯಾಂಕ್ ಫೀಲ್ಡಾಫಿಸರ್, ಅವರದ್ದು ಒಂದೆರಡು ಸೈನ್ ಬೇಕು, ಕರೀರಿ''. ''ಓ! ಎಮ್ಮೆ ಸಾಲದ್ದಾ? ಅವ್ರಿಲ್ಲ ಮನೇಲಿ, ಎಲ್ಲೊ ಹೊರಗಡೆಗೆ ಹೋಗಿದ್ದಾರೆ, ನಾನವ್ರ ಹೆಂಡ್ತಿ. ನಾಳೆ ಬೆಳಿಗ್ಗೆ ಕಳಿಸಿಕೊಡ್ತೀನಿ. ಇನ್ನೆಷ್ಟು ಉಳಿದಿದೆ? ಸಾಲ ಮುಗೀತ ಬಂದಿದೆ ಅಲ್ವಾ?''

''ಇಲ್ಲಮ್ಮಾ, ನೀವು ತಗೊಂಡಿರೋ ಸಾಲ ತೀರೋದಿರ್ಲಿ, ಡಬಲ್ ಆಗ್ಹೋಗಿದೆ, ವಸೂಲಿಗೆ ಕೋರ್ಟಿಗೆ ಹಾಕ್ತಿದೀವಿ. ಅನಿಮಲ್ ಹಸ್ಬ್ಯಾಂಡ್ರಿ ಲೋನಲ್ವಾ? ಅದು ಮೂವತ್ತಾರು ತಿಂಗಳೊಳಗೇ ತೀರಬೇಕು. ಲೆಟರ್ ಹಾಕಿದ್ರೂ ಬರಲ್ಲ, ನೋಟೀಸ್ ಕಳಿಸಿದ್ರೂ ಬಂದಿಲ್ಲ. ಬೇರೆ ದಾರಿಯಿಲ್ಲ ಎಂದು ನಾನೇ ಹುಡಿಕ್ಕೊಂಡು ಬಂದೆ''

''ಆಂಇ...?............ ನೀವು ಬರೋ ದಾರೀಲಿ ಆ ಸ್ಕೂಲ್ ಮನೆ ಸಿಕ್ಲಿಲ್ವಾ? ಅಲ್ಲೇ ಬೆಳಿಗ್ಗಿಂದ ರಾತ್ರಿ ತನಕಾ ಇಸ್ಪೀಟಾಡ್ತಾ ಕೂತಿರ್ತನೆ. ಕಳ್ ನನ್ಮಗ''

''ಪ್ರತೀ ದಿನ ಹಾಲು ಕರೀತೀರಿ, ಡೈರಿಗೆ ಹಾಲು ಹಾಕ್ತೀರಿ, ತಿಂಗಳಿಗೊಮ್ಮೆ ಪೇಮೆಂಟ್ ಬರತ್ತಲ್ವಾ? ಯಾಕೆ ಕಟ್ಟಲ್ಲ? ಅನಿಮಲ್ ಹಸ್ಬ್ಯಾಂಡ್ರಿ ಲೋನನ್ನ ಸರಿಯಾಗಿ ಕಟ್ಟಿ ಕ್ಲೋಸ್ ಮಾಡಿದ್ರೆ, ನಿರಂತರವಾಗಿ ಬ್ಯಾಂಕಿನಿಂದ ನಿಮಗೆ ಸಾಲ ಸಿಗುತ್ತಲೇ ಇರುತ್ತೆ''

''ಕರೆಕ್ಟು!! ಅವ್ನು ಅನಿಮಲ್ ಹಸ್ಬ್ಯಾಂಡೇ....... ಆ ಗಂಡ್ಮುಂಡೇಮಗ ಸೇಮ್ ದನಾನೇ........'' ಎಂದಳು ಡಿಕಾಕ್ಷಮೂರ್ತಿ ಹೆಂಡ್ತಿ ಕೆಳ್ಳಾಮನೆ ಯಸೋದ.

ಸರಿ, ಎಂದುಕೊಂಡು ವಾಪಾಸ್ ಜೀಪು ನಿಲ್ಲಿಸಿದಲ್ಲಿಗೆ ಬಂದ ರಾಜಕುಮಾರ ಡ್ರೈವರನೆಲ್ಲಿ ಎಂದು ಅತ್ತಿತ್ತ ನೋಡಿದರೆ ಆ ಮನುಷ್ಯ ಆ ಮೂವರು ವೃದ್ಧರೊಂದಿಗೆ ಪಟ್ಟಾಂಗ ಹೊಡೆಯುತ್ತಾ ನಿಂತಿದ್ದ. ರಾಜಕುಮಾರನತ್ತ ನೋಡಿದ ಡ್ರೈವರ್ ಲಗುಬಗೆಯಿಂದ ಜೀಪಿನೆಡೆಗೆ ಬಂದು 'ಹೊರಡೋಣ್ವೇ ಸರ್' ಎಂದವನೇ ಜೀಪ್ ಸ್ಟಾರ್ಟ್ ಮಾಡಿದ. ನಿಂತಿದ್ದ ಜೀಪನ್ನು ಮುಂದಕ್ಕೆ ಚಲಾಯಿಸಲೆತ್ನಿಸಿದ ಡ್ರೈವರನಿಗೆ ಜೀಪು ಯಾಕೋ ಮುಂದಕ್ಕೆ ಹೋಗುತ್ತಿಲ್ಲವೆಂದೆನಿಸಿ, ಇಳಿದು ನೋಡಿದರೆ, ಹಿಂದಿನ ಎರಡೂ ಚಕ್ರಗಳು ಗಾಳಿ ಕಳೆದುಕೊಂಡು ಹಾಗೇ ನಿಂತಲ್ಲೇ ಅಪ್ಪಚ್ಚಿಯಾಗಿ ಮುಂದಕ್ಕೆ ಬರಲಾರೆವೆಂದು ರಚ್ಚೆ ಹಿಡಿದಿದ್ದವು.

ಇಸ್ಪೀಟು ಆಡುತಿದ್ದ ಪೋಕರಿಗಳ್ಯಾರೋ ಬೀದಿಯಲ್ಲಿ ಆಟವಾಡುತಿದ್ದ ಪುಂಡ ಹುಡುಗರನ್ನು ಕಳಿಸಿ, ಚಕ್ರಗಳ ಗಾಳಿಯನ್ನು ತೆಗೆಸಿದ್ದರು. ಎರಡೂ ಟೈರುಗಳಿಗೆ ಗಾಳಿ ತುಂಬದೇ ಅಲ್ಲಿಂದ ಹೋಗಲಾಗುವುದಿಲ್ಲವಾದ್ದರಿಂದ ರಾಜಕುಮಾರ ಡ್ರೈವರನನ್ನು ಟೈರಿಗೆ ಗಾಳಿ ಹೊಡೆಯಲು ಪಂಪೊಂದನ್ನು ಹೊಂದಿಸಲು ಹೇಳಿದ್ದಕ್ಕೆ, ಡ್ರೈವರ್ ಯಾರೋ ಒಬ್ಬ ಹುಡುಗನೊಡನೆ ಊರಿನೊಳಕ್ಕೆ ಹೋದ. ಹಾಗೆಯೇ ಕಾಲಯಾಪನೆಗಾಗಿ ಆ ವೃದ್ಧರನ್ನು ಮಾತನಾಡಿಸ್ತಾ ''ಏನ್ ಯಜಮಾನ್ರೇ, ನಿಮ್ಮೂರ್ ಹುಡುಗ್ರೆಲ್ಲಾ ಇಸ್ಪೀಟ್ ಅಡ್ತಾ ಕಾಲ ಕಳೀತಿದಾರಲ, ನಿಮ್ ಕಾಲ್ದಲ್ಲೂ ಹೀಗೇನಾ ಅಥ್ವಾ ಬೇರೆ ಆಟಗಳಿದ್ವಾ?''

''ಆಟಾನಾ? ಒಂಟಿ ಕಾಲಿನ ಓಟ, ಓಡುವ-ಬೆನ್ನಟ್ಟುವ ಆಟ, ಕಡ್ಡಿಯಾಟ-ಕೋಲಾಟ, ಗೋಲಿ-ಗಜ್ಜುಗ, ಮರಕೋತಿ, ಹೊಳೆಗೆ ಹಾರಿ ಈಜು ಹೊಡೀತಿದ್ವಿ. ಬುಗರಿಯಾಟವನ್ನು ಬೀದಿ ಬೀದಿಗಳಲ್ಲಿ ಕಾಣುವ ಕಾಲ ಎಂದೋ ಕಳೆದುಹೋಯ್ತು. ಅಪಿಟ್, ಗುನ್ನ, ಮೈಸೂರ್ ಗುನ್ನ, ಗಿಲ್ಲಿ ದಾಂಡು, ಡಬಲ್-ಡಬಲ್ ಗುಲ್ಟೋರ್ಯ, ಐಸ್‌ಪೈಸ್, ಹಸು-ಹುಲಿ ಆಟಗಳು ಒಂದು ಬೀದಿಯ ಮಕ್ಕಳೇ ಸೇರಿ ಆಡಂಥವು''.

''ಅವ್ವುಟ್ರೆ, ಅವಲಕ್ಕಿ, ಪವಲಕ್ಕಿ......... ಹಾಗೆಯೇ ಇದ್ಯಾರ್ ಮನೆ ಕುದುರೆ?, ಕೈ ಕೈ ಎಲ್ಲೋಯ್ತು?, ಹಪ್ಪಳ ಹಪ್ಪಳ, ಕಲ್ಲಾಟ, ಕಣ್ಣಾಮುಚ್ಚೆ ಕಾಡೆಗೂಡೆ ಹೀಗೆಲ್ಲ ಆಟಗಳಿದ್ವು. ಗೊಂಬೆ, ಗಾಡಿಗಳನ್ನ ನಾವೇ ತಯಾರಿಸಿಕೊಳ್ತಿದ್ವು. ಒಗಟುಗಳನ್ನು ಹೇಳುತ್ತಿದ್ದುದೇ ಒಂದು ಸಂತೋಸ.

'ರತ್ತೋ ರತ್ತೋ ರಾಯನ ಮಗಳೇ, ಬಿತ್ತೋ ಬಿತ್ತೋ ಭೀಮನ ಮಗಳೇ, ಹದಿನಾರೆಮ್ಮೆ ಕಾಯ್ಲಲಾರೆ, ಬೈಟು ಗುಬ್ಬಿ ಬಾಳೆಯ ಕಂಬ, ಕುಕ್ಕರೆ ಬಸವಿ ಕೂರೇ ಬಸವಿ' ಎಂದು ವಿಶಿಷ್ಟವಾದ ರಾಗವನ್ನು ಹೇಳುತ್ತಿದ್ದುದನ್ನು ಕೇಳಿ ವರುಷಗಳೇ ಕಳೆದಿವೆ''.

''ಯಜಮಾನ್ರೇ, ಯಾಕೆ ನಿಮ್ಮೂರ್ನೋರು ಬಹಳ ಜನ ಸಾಲಾನ್ನ ಕಟ್ತಾ ಇಲ್ವಲ್ಲ. ಒಂದು ಲಕ್ಷ ತಗೊಂಡಿದ್ದು ಮೂರ್ಲಕ್ಷ ಆಗಿದೆ, ಯಾಕೆ ವ್ಯವಹಾರ ಹಾಳ್ಮಾಡ್ಕಂತಿದಾರೆ?''

''ಅಯ್ಯೋ ಈ ದಾರಿ ತಪ್ಸೋ ಕಳ್ ನನ್ಮಕ್ಳು ಇದಾರಲ್ಲ. ಕಟ್ಬೇಡ ಮಾರಾಯ, ನಮಗೆ ಓಟ್ಹಾಕು; ನಾವು ಗೆದ್ದು, ಲೂಟಿ ಮಾಡಿ ದುಂಡಗಾಗ್ತೀವಿ, ನಮ್ಮಪ್ಪನ ಮನೇ ಆಸ್ತಿ ಮಾರಿ, ನೀನೂ-ನಿಮ್ಮಪ್ಪನೂ ಮಾಡಿರೋ ಸಾಲಾನ ಮನ್ನಾ ಮಾಡ್ತೀವಿ ಅಂತೇಳಿ ನಮ್ಮನೇನೆಲ್ಲ ಹಾಳ್ಮಾಡಿದ್ರು. ಸಾಲ ತಗಂಡು ಹತ್ತನ್ನೆರಡು ವರ್ಷ ಬ್ಯಾಂಕಿನ ಕಡೆ ತಿರುಗಿಯೂ ನೋಡ್ದೆ ನೆಂಟ್ರು, ಮನೆ ತಿರ್ಕಂಡು, ಇಸ್ಪೀಟ್ ಆಡ್ಕಂಡು, ಪುಡಿ ಪುಡಾರ್ಕೆ ಮಾಡ್ಕಂಡಿದ್ರೆ, ಮೂರ್ಲಕ್ಷನೂ ಆಗುತ್ತೆ ಆರ್ಲಕ್ಷನೂ ಆಗುತ್ತೆ. 'ಬ್ಯಾಂಕ್ನವ್ರು ನಮ್ದೇನು ಕಿತ್ಕಾತಾರೆ? ನೋಡನ ಇರ್ಲಾ!! ಸಬ್ಸಿಡಿ ಲೆಕ್ಕದಲ್ಲಿ ಗೌರ್ಮೆಂಟಿಗೂ ಇಟ್ಟು, ಸಾಲದ ಲೆಕ್ಕದಲ್ಲಿ ಬ್ಯಾಂಕಿಗೂ ಇಕ್ರಲಾ' ಅಂತ ಕಟ್ಟೋರ್ನೂ ಕಟ್ದಂಗೆ ಮಾಡಿ, ಮನೆ-ಮಠ ಹರಾಜ್ಮಾಡಿಸ್ತಾರೆ ಅಷ್ಟೇ''.

# ಇತಿಹಾಸದಲ್ಲಿ ಈ ದಿನ

## ಸೆಪ್ಟೆಂಬರ್-27

1821: ಮೆಕ್ಸಿಕೊ ಸ್ಪೇನ್‌ನಿಂದ ಸ್ವಾತಂತ್ರ್ಯ ಪಡೆದಿತು.

1822: ಫ್ರೆಂಚ್ ಪಂಡಿತ ಜಾನ್-ಫ್ರಾಂಸ್ವಾ ಶಾಂಪೋಲಿಯನ್ ರೊಸೆಟ್ಟಾ ಶಿಲಾಶಾಸನದ ಈಜಿಪ್ಟಿನ ಚಿತ್ರಲಿಪಿಯನ್ನು ಅರ್ಥೈಸಿರುವುದಾಗಿ ಘೋಷಿಸಿದರು.

1825: ಇಂಗ್ಲೆಂಡ್‌ನಲ್ಲಿ ಸ್ಟಾಕ್ಟನ್-ಡಾರ್ಲಿಂಗ್ಟನ್ ರೈಲ್ವೆ ಆರಂಭವಾಯಿತು. ಇದು ಸಾರ್ವಜನಿಕವಾಗಿ ಉಗಿ ರೈಲಿನಿಂದ ಸಂಚರಿಸಿದ ಮೊದಲ ರೈಲು ಸೇವೆಯಾಗಿ ಗುರುತಿಸಲ್ಪಟ್ಟಿದೆ.

1940: ಜರ್ಮನಿ, ಇಟಲಿ ಮತ್ತು ಜಪಾನ್ ನಡುವೆ ತ್ರಿಪಕ್ಷೀಯ ಒಪ್ಪಂದಕ್ಕೆ ಸಹಿ ಹಾಕಲಾಯಿತು.

1996: ತಾಲಿಬಾನ್ ಪಡೆಗಳು ಅಫ್ಘಾನಿಸ್ತಾನದ ರಾಜಧಾನಿ ಕಾಬೂಲ್ ವಶಪಡಿಸಿಕೊಂಡವು.

1998: ಗೂಗಲ್ ತನ್ನ ಸ್ಥಾಪನಾ ದಿನಾಂಕವಾಗಿ ಗುರುತಿಸಿಕೊಂಡಿತು.

### ಜನನ

1907: ಭಾರತದ ಸ್ವಾತಂತ್ರ್ಯ ಹೋರಾಟಗಾರ ಭಗತ್ ಸಿಂಗ್

### ನಿಧನ

1833: ಸಮಾಜ ಸುಧಾರಕ ರಾಜಾ ರಾಮಮೋಹನ ರಾಯ್

1932: ಖ್ಯಾತ ಹಿಂದಿ ಚಿತ್ರ ನಿರ್ದೇಶಕ ಯಶ್ ಚೋಪ್ರಾ

1972: ಭಾರತೀಯ ಗ್ರಂಥಾಲಯ ವಿಜ್ಞಾನಿ ಎಸ್.ಆರ್. ರಂಗನಾಥನ್

2008: ಖ್ಯಾತ ಗಾಯಕ ಮಹೇಂದ್ರ ಕಪೂರ್

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248